**ದಿನಾಂಕ: 01-07-2021 ರಂದು ನಡೆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 33ನೇ ಸಭೆಯ ನಡವಳಿಗಳು**

**: ಅಧ್ಯಕ್ಷತೆ :**

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್**

**ಸನ್ಮಾನ್ಯ ಕಾರ್ಮಿಕ ಸಚಿವರು**

**ಹಾಗೂ**

**ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.**

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿನಿಧಿ ಸದಸ್ಯರುಗಳು:**

1. ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದೂ ಮಜ್ದೂರ್ ಸಭಾ, ಬೆಂಗಳೂರು
2. ಶ್ರೀ ಎಸ್. ಎಸ್ ಪ್ರಕಾಸಂ, ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು
3. ಶ್ರೀಮತಿ ಶಿವಾನಿ ಶಾಂತರಾಮ ಭಟ್ಕಳ, ರಾಜ್ಯ ಪ್ರತಿನಿಧಿ ಸದಸ್ಯರು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು
4. ಶ್ರೀ ಸುರೇಶ್‌ಎಸ್. ನಾಡಿಗೇರ್ ಅಧ್ಯಕ್ಷರ ಪರವಾಗಿ, ಪ್ರಧಾನ ಕಾರ್ಯದರ್ಶಿ, ಭಾರತೀಯ ಮಜ್ದೂರ್ ಸಂಘ, ಬೆಂಗಳೂರು

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಮಾಲೀಕರ ಪರ ಪ್ರತಿನಿಧಿ ಸದಸ್ಯರುಗಳು:**

1. ಶ್ರೀ ರವೀಂದ್ರ,ಅಧ್ಯಕ್ಷರು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು
2. ಶ್ರೀ ಅಬ್ದುಲ್ ಸತ್ತಾರ್, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು

**ಹಾಜರಿದ್ದ ಅಧಿಕಾರಿ ಅಥವಾ ಅವರ ನಾಮ ನಿರ್ದೇಶಿತ ಸದಸ್ಯರು:**

1. ಶ್ರೀಮತಿ ಡಾ.ಜಿ.ಕಲ್ಪನಾ, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ಬೆಂಗಳೂರು
3. ಕಲ್ಯಾಣ ಆಯುಕ್ತರು, ಭಾರತ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು-ಇವರ ಪರವಾಗಿ ಶ್ರೀ ಕೆ.ಶೇಖರ್, ಶ್ರೀ.ರಾಮದುರ್ಗಾ ಪ್ರಸಾದ್,
4. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು-ಇವರ ಪರವಾಗಿ ಶ್ರೀ ಎಲಿಷ ಆಂಡ್ರೂಸ್, ಉಪ ಕಾರ್ಯದರ್ಶಿ.
5. ನಿರ್ದೇಶಕರು ಅಭಿವೃದ್ಧಿ-ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ವಿಕಾಸಸೌಧ, ಬೆಂಗಳೂರು-ಇವರ ಪರವಾಗಿ ಶ್ರೀ ಕೆ. ಯಾಲಕ್ಕಿಗೌಡ.

6. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು-ಇವರ ಪರವಾಗಿ ಶ್ರೀ ದುಷ್ಯಂತ್ ರಾಜಾನಂದ, ಟೆಕ್ನಿಕಲ್ ಅಸಿಸ್ಟೆಂಟ್

**ಗೈರುಹಾಜರಿದ್ದವರು:-**

1. ಅಧ್ಯಕ್ಷರು, CREDAI, ಬೆಂಗಳೂರು.
2. ಅಧ್ಯಕ್ಷರು, Construction Federation of India, New Delhi.

******

ಮಂಡಳಿಯ ಕಾರ್ಯದರ್ಶಿಯವರು, ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸ್ವಾಗತಿಸಿ, ಮಂಡಳಿಯ 33ನೇ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರನ್ನು ಕೋರಿದರು.

ಮಾನ್ಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಪ್ರಥಮವಾಗಿ ಮಂಡಳಿವತಿಯಿಂದ ಕೋವಿಡ್-19ರ ಸಾಂಕ್ರಾಮಿಕ ರೋಗದ 2ನೇ ಅಲೆಯ ಪ್ರಯುಕ್ತ ಘೋಷಿಸಲಾದ ಲಾಕ್‌ಡೌನ್ ಸಮಯದಲ್ಲಿ ವಲಸೆ ಕಟ್ಟಡ ಕಾರ್ಮಿಕರಿಗೆ ವಿತರಿಸಲಾದ ಆಹಾರ ಸಾಮಗ್ರಿಗಳ ಕಿಟ್‌ಗಳು,ರಕ್ಷಣಾ ಮತ್ತು ನೈರ್ಮಲ್ಯೀಕರಣದ ಕಿಟ್‌ಗಳು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಬ್ಬ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಘೋಷಿಸಲಾದ ಒಂದು ಬಾರಿ ಸಹಾಯ ಧನ ರೂ.3,000/- ಕೋವಿಡ್ ಪರಿಹಾರದ ಮೊತ್ತವನ್ನು ಕಾರ್ಮಿಕರ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಿರುವ ಕುರಿತಂತೆ ಗೌರವಾನ್ವಿತ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮೆಚ್ಚುಗೆ ವ್ಯಕ್ತಪಡಿಸಿ ಒಳ್ಳೆಯ ಅಭಿಪ್ರಾಯ ನೀಡಿದ್ದು, ಕಾರ್ಮಿಕ ಇಲಾಖೆಗೆ ಗೌರವ ಮತ್ತು ಹೆಮ್ಮೆಯ ವಿಷಯವೆಂದು ಹರ್ಷಿಸುತ್ತಾ ಸಭೆಗೆ ತಿಳಿಸಿದರು ಹಾಗೂ ಈ ಕಾರ್ಯಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರಿಗೆ, ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗದವರಿಗೆ ಅಭಿನಂದನೆಯನ್ನು ತಿಳಿಸಿದರು.

## ವಿಷಯ ಸೂಚಿ:01

**ದಿನಾಂಕ: 18-02-2021ರಂದು ನಡೆದ 32ನೇ ಸಭೆಯ ನಡವಳಿಗಳನ್ನು ಓದುವುದು ಮತ್ತು ಸ್ಥಿರೀಕರಿಸುವುದು**

ದಿನಾಂಕ:18-02-2021 ರಂದು ನಡೆದ 32ನೇ ಸಭೆಯ ನಡವಳಿಗಳಿಗೆ ಕೈಗೊಳ್ಳಲಾದ ಕ್ರಮದ ಅನುಪಾಲನಾ ವರದಿಯನ್ನು ಮಂಡಳಿಯ ಕಾರ್ಯದರ್ಶಿಗಳು ಸಭೆಗೆ ಮಂಡಿಸಿದರು.ಅದನ್ನು ಸಭೆಯಲ್ಲಿ ಸರ್ವಾನುಮತದಿಂದಅಂಗೀಕರಿಸಲಾಯಿತು.

## ವಿಷಯ ಸಂಖ್ಯೆ-02

**ಕೋವಿಡ್-19 ರ ಸಾಂಕ್ರಾಮಿಕ ರೋಗದ 2 ನೇ ಅಲೆಯಿಂದಾಗಿ ಸಂಕಷ್ಟಕ್ಕೊಳಗಾದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಬಾರಿ ಸಹಾಯ ಧನವಾಗಿ ರೂ. 3,000/-ಗಳನ್ನು ಮಂಡಳಿಯ ವತಿಯಿಂದ ಪಾವತಿಸಲು ಘೋಷಿಸಲಾಗಿದ್ದು, ಫಲಾನುಭವಿಗಳ ಖಾತೆಗೆ ಸದರಿ ಮೊತ್ತವನ್ನು ವರ್ಗಾಯಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ**

ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ, ಪ್ರತಿಯೊಬ್ಬ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಆಧಾರ್ ಜೋಡಣೆ ಆಗಿರುವ ಬ್ಯಾಂಕ್ ಖಾತೆಗೆ ರೂ. 3000/-ಗಳಂತೆ ಈಗಾಗಲೇ **17,79,358** ಕಾರ್ಮಿಕರಿಗೆ ಕೋವಿಡ್ ಪರಿಹಾರ ಮೊತ್ತ ಪಾವತಿಸಿದೆ ಎಂದು ಸಭೆಗೆ ತಿಳಿಸಿದರು. ಕೋವಿಡ್ ಪರಿಹಾರದ ಮೊತ್ತವುಇನ್ನೂ ಕೆಲವು ಕಟ್ಟಡಕಾರ್ಮಿಕರ ಬ್ಯಾಂಕ್ಖಾತೆಗೆಆಧಾರ್ ಸಂಖ್ಯೆ ಜೋಡಣೆ ಆಗದೇ ಇರುವುದರಿಂದ ಪರಿಹಾರದ ಮೊತ್ತವು ತಲುಪಿರುವುದಿಲ್ಲ. ಈ ಬಗ್ಗೆ ನೋಂದಾಯಿತ ಕಟ್ಟಡ ಕಾರ್ಮಿಕರಿಂದ ಆಧಾರ್ ಮಾಹಿತಿಯನ್ನು ಪಡೆದುಕೊಂಡು ಅವರ ಬ್ಯಾಂಕ್ಖಾತೆಗೆ ನೇರವಾಗಿ ಪರಿಹಾರದ ಮೊತ್ತವನ್ನು ಪಾವತಿಸಲಾಗುವುದೆಂದು ಸಭೆಗೆ ತಿಳಿಸಿದರು.ಮಂಡಳಿಯ ಕಾರ್ಯದರ್ಶಿಗಳು ಕೋವಿಡ್-19ರ ಸಾಂಕ್ರಾಮಿಕ ರೋಗದ 2ನೇ ಅಲೆಯಿಂದಾಗಿ ಸಂಕಷ್ಟಕ್ಕೊಳಗಾದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಬಾರಿ ಸಹಾಯ ಧನವಾಗಿ ರೂ. 3,000/-ಗಳನ್ನು ಮಂಡಳಿಯ ವತಿಯಿಂದ ಪಾವತಿಸಲು ಘೋಷಿಸಲಾಗಿದ್ದು, ಫಲಾನುಭವಿಗಳ ಖಾತೆಗೆ ಸದರಿ ಮೊತ್ತವನ್ನು ವರ್ಗಾಯಿಸಿರುವುದಕ್ಕೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು.

ತೀರ್ಮಾನ:

**ಅರ್ಹ ಫಲಾನುಭವಿಗಳ ಖಾತೆಗೆ ಪರಿಹಾರ ಮೊತ್ತವನ್ನು ಡಿಬಿಟಿ ಮೂಲಕ ವರ್ಗಾಯಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ, ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-03

**ಕಾರ್ಮಿಕ ಗೃಹಭಾಗ್ಯ (ಹೌಸಿಂಗ್) ಯೋಜನೆಯನ್ನು ಪರಿಷ್ಕೃತಗೊಳಿಸಿ ಜಾರಿಗೊಳಿಸಲು ಅನುಮೋದನೆ ನೀಡುವ ಬಗ್ಗೆ.**

ಕಾರ್ಮಿಕ ಸಚಿವರುಹಾಗೂ ಮಂಡಳಿಯ ಅಧ್ಯಕ್ಷರು ಈ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳೊಡನೆ ಚರ್ಚಿಸಿರುವುದಾಗಿ ತಿಳಿಸುತ್ತಾ ಕಾರ್ಮಿಕ ಗೃಹಭಾಗ್ಯ ಯೋಜನೆಗಾಗಿ ಮಂಡಳಿಯ ಸುಂಕ ಮೊತ್ತದಿಂದ ಶೇ.10ರಷ್ಟು ಹಣವನ್ನು ಮಾತ್ರ ಬಳಸಿಕೊಳ್ಳಲು ಕೇಂದ್ರ ಸರ್ಕಾರದ ಕಾಯ್ದೆಯಡಿ ಅವಕಾಶವಿದ್ದು, ಇಷ್ಟೇ ಮೊತ್ತಕ್ಕೆ ಹಣ ಬಳಕೆಯನ್ನು ಸೀಮಿತಗೊಳಿಸಬೇಕಾಗುತ್ತದೆಂದು ಸಭೆಯ ಸರ್ವ ಸದಸ್ಯರುಗಳಿಗೆ ಹೇಳಿದರು.

ಈ ಹಿನ್ನೆಲೆಯಲ್ಲಿ ಈಗಾಗಲೇ ವಸತಿ ಇಲಾಖೆಯ ಸಹಯೋಗ ದೊಂದಿಗೆ ಕಾರ್ಮಿಕರ ಗೃಹಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದ್ದು, ವಸತಿ ಇಲಾಖೆಯ ಮುಖಾಂತರ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ರೂ.76.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ, ಸದರಿ ಮೊತ್ತವನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಪಟ್ಟಣ ಪ್ರದೇಶದ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಕಟ್ಟಡ ಕಾರ್ಮಿಕರಿಗೆ ಮಾತ್ರ ಉಪಯೋಗಿಸಲಾಗುತ್ತಿದ್ದು, ರಾಜ್ಯದಾದ್ಯಂತ ಇತರೆ ಗ್ರಾಮೀಣ ಮತ್ತು ನಗರ ಪ್ರದೇಶಕ್ಕೆ ಈ ಯೋಜನೆಯನ್ನು ವಿಸ್ತರಿಸಲಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಗ್ರಾಮೀಣ ವಿಭಾಗದ/ಕೊಳಗೇರಿ ವ್ಯಾಪ್ತಿಯಿಂದ ಹೊರಗುಳಿದ ನೋಂದಾಯಿತ ಕಟ್ಟಡ ಕಾರ್ಮಿಕರು ಸದರಿ ಯೋಜನೆಯಿಂದ ವಂಚಿತರಾಗಿರುತ್ತಾರೆ. ಆದ್ದರಿಂದ, ಸದರಿ ಯೋಜನೆಯನ್ನು ಎಲ್ಲಾ ಅರ್ಹ ಕಾರ್ಮಿಕರಿಗೆ ವಿಸ್ತರಿಸಿ ಸರ್ಕಾರದ ವಿವಿಧ ವಸತಿ ಯೋಜನೆಗಳೊಂದಿಗೆ ಅನುಷ್ಠಾನಗೊಳಿಸಲು ಹಾಗೂ ಕಾರ್ಮಿಕರ

ಹಿತದೃಷ್ಟಿಯಿಂದ ನಿಯಮ 42ಕ್ಕೆ ತಿದ್ದುಪಡಿ ತಂದು ಗೃಹಭಾಗ್ಯ ಯೋಜನೆಯಡಿ ಪ್ರಯೋಜನ ಪಡೆಯಬೇಕಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕನು ಮಂಡಳಿಯ ಫಲಾನುಭವಿಯಾಗಿ ನೋಂದಣಿಯಾಗಿ 5 ವರ್ಷ ಅವಧಿ ಪೂರ್ಣಗೊಂಡು ಅವನ ವಯಸ್ಸಿನ ಮಿತಿಯನ್ನು 45 ವರ್ಷಕ್ಕೆ ಸೀಮಿತಗೊಳಿಸುವ ಬಗ್ಗೆ ನಿಯಮಗಳಲ್ಲಿ ತಿದ್ದುಪಡಿ ಮಾಡಲು ಸಭೆಗೆ ಸೂಚಿಸಿದರು.

ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದರು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಅರ್ಹ ನೊಂದಾಯಿತ ಕಾರ್ಮಿಕರಿಗೆ ಸಾಲವನ್ನು ಮಂಜೂರು ಮಾಡುವಾಗ ಅವರು ಇನ್ನೂ 15 ವರ್ಷ ಸೇವೆಯಲ್ಲಿರಬೇಕಾಗಿರುತ್ತದೆ. 60 ವರ್ಷ ವಯಸ್ಸನ್ನು ನಿವೃತ್ತಿ ಎಂದು ಪರಿಗಣಿಸಿ 15 ವರ್ಷ ಸೇವೆ ಇರುವ ಅರ್ಹ ಕಾರ್ಮಿಕರಿಗೆ ಗೃಹ ಭಾಗ್ಯ ಯೋಜನೆಯಡಿಯಲ್ಲಿ ಸಾಲ ಸೌಲಭ್ಯವನ್ನು ಮಂಜೂರು ಮಾಡಲು ಸರ್ವ ಸದಸ್ಯರು ತಮ್ಮ ಒಪ್ಪಿಗೆಯನ್ನು ಸೂಚಿಸಿದರು.**

## ವಿಷಯ ಸಂಖ್ಯೆ-04

**ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು COVID-19ರ 2ನೇ ಅಲೆಯಿಂದಾಗಿ COVID-19 Positive ದೃಢಪಟ್ಟಲ್ಲಿ ಸದರಿ ಚಿಕಿತ್ಸೆಯನ್ನು ನಿಯಮ 48 ರಡಿ ಸೇರಿಸಲು ಹಾಗೂ ವೇತನ ನಷ್ಟ ಪರಿಹಾರ ರೂ. 10,000/- ಗಳನ್ನು ನೀಡಲು ಮತ್ತು COVID-19ರ 2ನೇ ಅಲೆಯಿಂದಾಗಿ ಫಲಾನುಭವಿಯು ಮರಣ ಹೊಂದಿದರೆ ಅವರ ಅವಲಂಬಿತರಿಗೆ ರೂ.2.00 ಲಕ್ಷ ಪರಿಹಾರಧನ ವಿತರಿಸಲು ಅಧಿಸೂಚನೆ ಹೊರಡಿಸಲು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಈ ಕುರಿತು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ಮಾನ್ಯ ಮಂಡಳಿಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಹಾಗೂ ಪ್ರಾಧಿಕಾರದ ರಾಜ್ಯ ಮಟ್ಟದ ನಿರ್ವಹಣಾ ಸಮಿತಿಯು ನಡೆಸಿದ ವಿಡಿಯೋ ಕಾನ್ಫರನ್ಸ್ ಸಭೆಯಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕೋವಿಡ್ ಪೀಡಿತರಾಗಿ ಚಿಕಿತ್ಸೆ ಪಡೆದಲ್ಲಿ ಅವರ ಚಿಕಿತ್ಸಾ ವೆಚ್ಚವನ್ನು ಮಂಡಳಿಯಿಂದ ಮರುಪಾವತಿಸಲು ಕ್ರಮ ಕೈಗೊಳ್ಳಬೇಕೆಂದು ಹಾಗೂ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕೋವಿಡ್ ಪೀಡಿತರಾಗಿ ಮರಣ ಹೊಂದಿದ್ದಲ್ಲಿ ಸದರಿ ಕಾರ್ಮಿಕರ ನಾಮ ನಿರ್ದೇಶಕರಿಗೆ ಪರಿಹಾರವನ್ನು ನೀಡುವಂತೆ ಹಾಗೂ ಕಾರ್ಮಿಕರು ಕೋವಿಡ್ ಪೀಡಿತರಾಗಿ ಕೆಲಸಕ್ಕೆ ಗೈರು ಹಾಜರಾದ ದಿನಗಳಿಗೆ ಉಂಟಾದ ವೇತನ ನಷ್ಟಕ್ಕೆ ಪರಿಹಾರವನ್ನು ಒದಗಿಸುವಂತೆ ಮಂಡಳಿಗೆ ನಿರ್ದೇಶನ ನೀಡಿರುತ್ತದೆಂದು ತಿಳಿಸಿರುತ್ತಾರೆ.

ಕರ್ನಾಟಕ ನಿಯಮಗಳು 2006ರ ನಿಯಮ 44 ರಡಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮೃತ ಪಟ್ಟಲ್ಲಿ ಅವರ ನಾಮ ನಿರ್ದೇಶಿತರು ರೂ.54,000/-ಗಳವರೆಗೆ ಅನುಗ್ರಹರಾಶಿ ಮತ್ತು ಅಂತ್ಯ ಸಂಸ್ಕಾರ ವೆಚ್ಚವನ್ನು ಪಡೆಯಲು ಅರ್ಹರಿರುತ್ತಾರೆ. ಸದರಿ ನಿಯಮದಲ್ಲಿ ಕೋವಿಡ್-19 ಕಾಯಿಲೆಯಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಕಾರ್ಮಿಕರ ಅವಲಂಬಿತರಿಗೆ ಮೊತ್ತ ರೂ.2,00,000/- ಗಳ ಪರಿಹಾರವನ್ನು ನಿಗದಿ ಪಡಿಸಿದ್ದಲ್ಲಿ ಕೋವಿಡ್-19 ನಿಂದಾಗಿ ಕುಟುಂಬದ ಆಸರೆಯನ್ನು ಕಳೆದುಕೊಂಡ ಸದಸ್ಯರುಗಳಿಗೆ ಆರ್ಥಿಕ ಭದ್ರತೆಯನ್ನು ಒದಗಿಸಲು ಅನುಕೂಲವಾಗುತ್ತದೆಂದು ಸದರಸ್ಯರೆಲ್ಲರಿಗೂ ತಿಳಿಸಿದರು.

ಈ ಕುರಿತು ಮಂಡಳಿಯ ಘಟನೋತ್ತರ ಅನುಮೋದನೆಗೆ ಒಳಪಡಿಸುವ ಷರತ್ತಿಗೆ ಒಳಪಟ್ಟು ಮಂಡಳಿಯ ಘಟನೋತ್ತರ ಅನುಮೋದನೆಗಾಗಿ ಕೋರಿದರು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಸದರಿ ಅಂಶವನ್ನು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-೦೫

**ಮಂಡಳಿಯಲ್ಲಿ, ಕಾರ್ಮಿಕ ಆಯುಕ್ತರ ಅಧೀನ ಕಛೇರಿಗಳಲ್ಲಿ ಹಾಗೂ ಇತರೆ ಕಛೇರಿಗಳಲ್ಲಿ ಮಂಡಳಿಯ ವತಿಯಿಂದ ಹೊರ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಲಾದ ಸಿಬ್ಬಂದಿಗಳು COVID-19ರ ಸೋಂಕಿಗೆ ಒಳಗಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಲ್ಲಿ ಅಥವಾ ಆಕಸ್ಮಿಕವಾಗಿ ಮರಣ ಹೊಂದಿದಲ್ಲಿ ಪರಿಹಾರಧನ ನೀಡಲು ಹೊರಡಿಸಿದ ಆದೇಶಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ಮಂಡಳಿ ವತಿಯಿಂದ ವಿವಿಧ ಕಛೇರಿಗಳಲ್ಲಿ ಹಾಗೂ ಕಾರ್ಮಿಕ ಇಲಾಖೆಯ ಕ್ಷೇತ್ರ ಕಛೇರಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಕ್ಸಿಕ್ಯೂಟೀವ್ಸ್, ಡಾಟಾ ಎಂಟ್ರಿ ಆಪರೇಟರ್ಸ್ ಹಾಗೂ ಮಂಡಳಿಯ ಕೇಂದ್ರ ಕಛೇರಿಯ ಸಿಬ್ಬಂದಿಗಳಿಗೆ ಯಾವುದೇ ವೈದ್ಯಕೀಯ ಸೌಲಭ್ಯ ಸಂರಕ್ಷಣೆಗಳು ಇರುವುದಿಲ್ಲ.

ಸದರಿ ಸಿಬ್ಬಂದಿಗಳು ಕೋವಿಡ್-19ರ ಸೋಂಕಿಗೆ ಒಳಗಾದಲ್ಲಿ ಅಥವಾ ಕೋವಿಡ್-19ರ ಸೋಂಕಿಗೆ ಒಳಗಾಗಿ ಆಕಸ್ಮಿಕವಾಗಿ ಮರಣ ಹೊಂದಿದಲ್ಲಿ ಅವರಿಗೆ ಮೂಲ ವೈದ್ಯಕೀಯ ವೆಚ್ಚ ಅಥವಾ ರೂ. 2 ಲಕ್ಷಗಳು ಇವುಗಳಲ್ಲಿ ಯಾವುದು ಕಡಿಮೆ ಇರುತ್ತದೆಯೋ ಅದನ್ನು ಮತ್ತು ಒಂದು ವೇಳೆ ಸದರಿ ಸಿಬ್ಬಂದಿಗಳು ಮರಣ ಹೊಂದಿದಲ್ಲಿ ಸದರಿ ಸಿಬ್ಬಂದಿಗಳ ಅವಲಂಬಿತರಿಗೆ ರೂ.2.00 ಲಕ್ಷಗಳನ್ನು ಅನುಗ್ರಹರಾಶಿಯಾಗಿ ನೀಡಲು ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಸದರಿ ವಿಷಯವನ್ನು ಸಭೆಯ ಅವಗಾಹನೆಗಾಗಿ ಹಾಗೂ ಘಟನೋತ್ತರ ಅನುಮೋದನಾ ನಿರ್ಣಯಕ್ಕಾಗಿ ಮಂಡಿಸಿದರು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ಸೂಚಿಸಿತು.**

## ವಿಷಯ ಸಂಖ್ಯೆ-೦6

**ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರವನ್ನು ಅವರ ಅವಲಂಬಿತರಿಗೆ ಈಗಾಗಲೇ ಬಿಡುಗಡೆ ಮಾಡಿರುವ ಕುರಿತು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ ಹಾಗೂ ನೋಂದಾಯಿತರಲ್ಲದ 5 ಕಟ್ಟಡ ಕಾರ್ಮಿಕರು ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಮೃತ ಪಟ್ಟಿದ್ದು, ಇವರ ಅವಲಂಬಿತರಿಗೆ ಅಪಘಾತ ಮರಣ ಪರಿಹಾರವನ್ನು ವಿತರಿಸಲು ಅನುಮೋದನೆ ನೀಡುವ ಬಗ್ಗೆ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ (KSLSA) ಇವರು ಗುರುತಿಸಿರುವ ನಾಲ್ಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ವೈದ್ಯಕೀಯ ವೆಚ್ಚದ ಬಿಲ್‌ಗಳನ್ನು ಮಂಡಳಿಯಿಂದ ಮರು ಪಾವತಿಸಲು ಅನುಮೋದಿಸುವ ಬಗ್ಗೆ.**

ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರವನ್ನು ಅವರ ಅವಲಂಬಿತರಿಗೆ ಈಗಾಗಲೇ ಬಿಡುಗಡೆ ಮಾಡಿರುವ ಕುರಿತು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ ಹಾಗೂ ನೋಂದಾಯಿತರಲ್ಲದ 5 ಕಟ್ಟಡ ಕಾರ್ಮಿಕರು ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಮೃತ ಪಟ್ಟಿದ್ದು, ಇವರ ಅವಲಂಬಿತರಿಗೆ ಅಪಘಾತ ಮರಣ ಪರಿಹಾರವನ್ನು ವಿತರಿಸಲು ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಕಾರ್ಯದರ್ಶಿಯವರು ಮಂಡಿಸಿದರು.

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ (KSLSA) ಇವರು ಗುರುತಿಸಿರುವ ನಾಲ್ಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ವೈದ್ಯಕೀಯ ವೆಚ್ಚದ ಬಿಲ್‌ಗಳನ್ನು ಮಂಡಳಿಯಿಂದ ಮರು ಪಾವತಿಸಲು ಅನುಮೋದಿಸುವ ಬಗ್ಗೆ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರವನ್ನು ಅವರ ಅವಲಂಬಿತರಿಗೆ ಈಗಾಗಲೇ ಬಿಡುಗಡೆ ಮಾಡಿರುವ ಕುರಿತು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ ಹಾಗೂ ನೋಂದಾಯಿತರಲ್ಲದ 5 ಕಟ್ಟಡ ಕಾರ್ಮಿಕರು ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಮೃತ ಪಟ್ಟಿದ್ದು, ಇವರ ಅವಲಂಬಿತರಿಗೆ ಅಪಘಾತ ಮರಣ ಪರಿಹಾರವನ್ನು ವಿತರಿಸುವ ಕುರಿತು ಗೌರವಾನ್ವಿತ ಉಚ್ಛ ನ್ಯಾಯಾಲಯದ ನಿರ್ದೇಶನ ಇರುವುದರಿಂದ ಸಭೆಯ ಸದಸ್ಯರೆಲ್ಲರೂ ಈ ವಿಷಯವನ್ನು ಚರ್ಚಿಸಿ ಸರ್ವಾನುಮತದಿಂದ ಒಪ್ಪಿ ಘಟನೋತ್ತರಅನುಮೋದನೆನೀಡಿದರು.**

**ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ (KSLSA) ಇವರು ಗುರುತಿಸಿರುವ ನಾಲ್ಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ವೈದ್ಯಕೀಯ ವೆಚ್ಚದ ಬಿಲ್‌ಗಳನ್ನು ಮಂಡಳಿಯಿಂದ ಮರು ಪಾವತಿಸಲು ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ-07

**COVID-19 ರ 2ನೇ ಅಲೆಯ ಲಾಕ್‌ಡೌನ್ ಹಿನ್ನಲೆಯಲ್ಲಿ ಮಂಡಳಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಹಾಗೂ ವಲಸೆ ಕಾರ್ಮಿಕರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಿರುವ ಬಗ್ಗೆ ಮತ್ತು ತಗಲಬಹುದಾದ ವೆಚ್ಚಗಳಿಗೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ಕೋವಿಡ್-19ರ ಎರಡನೇ ಅಲೆಯ ತೀವ್ರತೆಯನ್ನು ತಡೆಯುವ ಉದ್ದೇಶದಿಂದ ಸರ್ಕಾರವು ಘೋಷಿಸಿದ ಲಾಕ್‌ಡೌನ್‌ನಿಂದಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುತ್ತಾರೆ. ಈ ಸಂದರ್ಭದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮಂಡಳಿ ವತಿಯಿಂದ ವಿಶೇಷ ಯೋಜನೆಗಳ ಮೂಲಕ ಸೌಲಭ್ಯ ಒದಗಿಸುವ ಅನಿವಾರ್ಯತೆ ಉಂಟಾಗಿರುತ್ತದೆ. ಅಲ್ಲದೇ, ಮಾನ್ಯ ಸರ್ವೋಚ್ಚ ನ್ಯಾಯಾಲಯ, ಉಚ್ಛ ನ್ಯಾಯಾಲಯ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನಗಳಂತೆ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಕಿಟ್‌ಗಳು, ರಕ್ಷಣಾ ಮತ್ತು ನೈರ್ಮಲ್ಯೀಕರಣದ ಕಿಟ್‌ಗಳು, ಕಾರ್ಮಿಕರು ವಾಸಿಸುವ ಕಾಲೋನಿಗಳಲ್ಲಿ Fumigation and Sanitize ಮಾಡಿಸುವಿಕೆ ಮತ್ತು ಕೋವಿಡ್ ಸಂದರ್ಭದಲ್ಲಿ ಕಾರ್ಮಿಕರಿಗೆ ಅವಶ್ಯಕ ಸೌಲಭ್ಯಗಳನ್ನು ಒದಗಿಸಲು ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಸಹಾಯಧನ

ಬಿಡುಗಡೆ ಮಾಡಲಾಗಿರುವ ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಕಾರ್ಯದರ್ಶಿಯವರು ಮಂಡಿಸಿದರು.

ತೀರ್ಮಾನ:

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ್ದು,ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯ, ಉಚ್ಛ ನ್ಯಾಯಾಲಯ ಮತ್ತುಕರ್ನಾಟಕರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನಗಳಂತೆ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಮತ್ತು ವಲಸೆ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಕಿಟ್‌ಗಳು, ರಕ್ಷಣಾ ಮತ್ತು ನೈರ್ಮಲ್ಯೀಕರಣದ ಕಿಟ್‌ಗಳನ್ನು ವಿತರಿಸಲಾಗಿರುವುದಕ್ಕೆ ಹಾಗೂ ಕಾರ್ಮಿಕರು ವಾಸಿಸುವ ಕಾಲೋನಿಗಳಲ್ಲಿ Fumigation and Sanitize ಮಾಡಿಸಿರುವುದಕ್ಕೆ ಮತ್ತು ಕೋವಿಡ್ ಸಂದರ್ಭದಲ್ಲಿ ಕಾರ್ಮಿಕರಿಗೆ ಅವಶ್ಯಕ/ ತುರ್ತು ಸೌಲಭ್ಯಗಳನ್ನು ಒದಗಿಸಲು ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ತಲಾ ರೂ. 5.00 ಲಕ್ಷಗಳ ಸಹಾಯಧನದ ಅನುದಾನ ಬಿಡುಗಡೆ ಮಾಡಿರುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-08

**ಸರ್ಕಾರದ ಆದೇಶದಂತೆ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವ್ಯಾಪ್ತಿಗೆ ಒಳಪಡುವ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಕಿಟ್‌ಗಳನ್ನು ವಿತರಿಸಲು ತಗಲುವ ವೆಚ್ಚವನ್ನು ತಾತ್ಕಾಲಿಕವಾಗಿ ಮಂಡಳಿವತಿಯಿಂದ ಭರಿಸಿ, ಸದರಿ ಮೊತ್ತವನ್ನು ಸರ್ಕಾರದಿಂದ ಮರು ಪಾವತಿಸಿಕೊಳ್ಳುವುದಕ್ಕೆ ಅನುಮೋದನೆ ನೀಡುವ ಬಗ್ಗೆ.**

ಕೋವಿಡ್-19ರ ಎರಡನೇ ಅಲೆಯ ತೀವ್ರತೆಯನ್ನು ತಡೆಯಲು ಸರ್ಕಾರವು ಲಾಕ್‌ಡೌನ್‌ಅನ್ನು ಜಾರಿಗೊಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಅಸಂಘಟಿತ ಮತ್ತು ವಲಸೆ ಕಾರ್ಮಿಕರಿಗೆ ಆಹಾರ ಕಿಟ್‌ಗಳನ್ನು ವಿತರಿಸಲು ಸೂಕ್ತ ಕ್ರಮಕೈಗೊಳ್ಳಲು ಮಾನ್ಯ ಉಚ್ಛ ನ್ಯಾಯಾಲಯದ ಆದೇಶದನ್ವಯ ವಲಸೆ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಕಿಟ್‌ಗಳನ್ನು ವಿತರಿಸಲು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಕೆಟಿಪಿಪಿ ಕಾಯ್ದೆ, 1999ರ ಕಲಂ 4ಎ ರಡಿ ವಿನಾಯಿತಿಯನ್ನು ಸರ್ಕಾರವು ನೀಡಿರುತ್ತದೆ. ಅಲ್ಲದೇ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಜಾರಿಗೊಳಿಸಿ, ಖರ್ಚಾಗುವ ಮೊತ್ತವನ್ನು ಮಂಡಳಿಯಿಂದಲೇ ಭರಿಸಿ ತದನಂತರ, ಸರ್ಕಾರದಿಂದ ಹಿಂಪಡೆಯುವಂತೆ ತಿಳಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದನ್ವಯ ಅಸಂಘಟಿತ ಕಾರ್ಮಿಕರು ಮತ್ತು ವಲಸೆ ಕಾರ್ಮಿಕರಿಗೆ 3.80 ಲಕ್ಷಕಿಟ್‌ಗಳನ್ನು ಖರೀದಿಸಿ ಮಂಡಳಿಯ ಅನುದಾನದಿಂದ ವ್ಯಯಿಸಿ ನಂತರ ಸರ್ಕಾರದಿಂದ ಹಿಂಪಡೆಯಲು ಕ್ರಮವಹಿಸಲಾಗುವುದು ಎಂದು ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

ತೀರ್ಮಾನ:

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ 3.80 ಲಕ್ಷ ಕಿಟ್‌ಗಳನ್ನು ಖರೀದಿಸಿ ಮಂಡಳಿಯ ಅನುದಾನದಿಂದ ವ್ಯಯಿಸಿ ನಂತರ ಸರ್ಕಾರದಿಂದ ಹಿಂಪಡೆಯಲು ಕ್ರಮವಹಿಸುವ ಬಗ್ಗೆ ತಿಳಿಸಿದರು ಈ ಬಗ್ಗೆ ಒಂದು ತಿಂಗಳೊಳಗಾಗಿ ರೂ.31.61 ಕೋಟಿ ಮೊತ್ತವನ್ನು ಮಂಡಳಿಗೆ ಹಿಂದಿರುಗಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಒಪ್ಪಿದ್ದು, ಸದರಿ ವಿಷಯವನ್ನು ಸರ್ವಾನುಮತದಿಂದ ಒಪ್ಪಿ ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ-09

**ಮಂಡಳಿಯಿಂದ ಕಾರ್ಮಿಕರ ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಸಹಾಯಧನದ ಯೋಜನೆಯನ್ನು ಸ್ಟೇಟ್ ಸ್ಕಾಲರ್‌ಶಿಪ್ ಪೋರ್ಟಲ್‌ನೊಂದಿಗೆ (SSP) ಕ್ರಮೀಕರಣಗೊಳಿಸಲು ಹಾಗೂ ಸದರಿ ಶೈಕ್ಷಣಿಕ ಸಹಾಯಧನ ಯೋಜನೆಯನ್ನು ಸರಳೀಕರಣಗೊಳಿಸಲು ಅನುಮೋದನೆ ನೀಡುವ ಬಗ್ಗೆ**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುವ ವಿವಿಧ 52 ವರ್ಗದಕಾರ್ಮಿಕರನ್ನು ಮಂಡಳಿಯ ಫಲಾನುಭವಿಗಳನ್ನಾಗಿ ನೋಂದಾಯಿಸಿಕೊಂಡು ಅವರಿಗೆ ಮತ್ತು ಅವರ ಅವಲಂಬಿತರಿಗೆ 19 ವಿವಿಧ ಬಗೆಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಿ ಈ ಮಂಡಳಿಯಿಂದ ಜಾರಿಗೊಳಿಸಲಾಗುತ್ತಿದೆ.

ಕಟ್ಟಡ ಮತ್ತುಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಮತ್ತು ಕರ್ನಾಟಕ ನಿಯಮಗಳು 2006ರ ಅನ್ವಯ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿಯು ರಚನೆಗೊಂಡಿರುತ್ತದೆ. ಕಾಯ್ದೆಯ ಕಲಂ-22ರಲ್ಲಿ ಮಂಡಳಿಯ ಕಾರ್ಯ ವಿಧಾನಗಳಡಿ ಚಾಲ್ತಿಯಲ್ಲಿರುವ ನೋಂದಾಯಿತ ಕಟ್ಟಡ ಕಾರ್ಮಿಕರ (ಫಲಾನುಭವಿಯ) ಎರಡು ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

ಕಟ್ಟಡ ಕಾರ್ಮಿಕರು ಮಂಡಳಿಯಲ್ಲಿ ಫಲಾನುಭವಿಯಾಗಿ ನೋಂದಣಿಯಾದ ನಂತರ ಗುರುತಿನ ಚೀಟಿಯಲ್ಲಿ ನೋಂದಣಿ ಸಂಖ್ಯೆ ಹಾಗೂ ಸದಸ್ಯತ್ವ ಅವಧಿಯನ್ನು ಹೊಂದಿದ್ದು, ಪ್ರಸ್ತುತ ಸದಸ್ಯತ್ವ ಚಾಲ್ತಿಯಲ್ಲಿರುವ ಅವಧಿಯನ್ನು ಪರಿಗಣಿಸಿ ಫಲಾನುಭವಿಯ ತನ್ನ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಂಡಳಿಯಿಂದ ಶೈಕ್ಷಣಿಕ ಸಹಾಯಧನ ಪಡೆಯಲು ಅರ್ಹರಿರುತ್ತಾರೆ.

ಮುಂದುವರೆದು, ರಾಜ್ಯಾದ್ಯಂತ ಶೈಕ್ಷಣಿಕ ಸಹಾಯಧನದ ಅರ್ಜಿಗಳು ಬಾಕಿ ಉಳಿದು ತೊಂದರೆಯಾಗುತ್ತಿದ್ದು, ಇದನ್ನು ಸರಳೀಕರಣಗೊಳಿಸಲು ಮಂಡಳಿಯ ಜಾಲತಾಣವನ್ನು State Scholarship Portal ನೊಂದಿಗೆ ಸಂಯೋಜಿಸುವುದರಿಂದ ಕಾರ್ಮಿಕರು ಶೈಕ್ಷಣಿಕ ಸಹಾಯಧನಕ್ಕಾಗಿ ಸಲ್ಲಿಸುವಂತಹ ಅರ್ಜಿಗಳು State Scholarship Portal ನಲ್ಲಿ ಮೊದಲು ಶಾಲೆಯ ಮುಖ್ಯೋಪಾಧ್ಯಾಯರ ಲಾಗಿನಲ್ಲಿಪರಿಶೀಲನೆಗೊಳಪಟ್ಟು ನಂತರ ಮಂಡಳಿಯ ಜಾಲತಾಣದಲ್ಲಿ ದಾಖಲಾಗುತ್ತವೆ. ಈ ವ್ಯವಸ್ಥೆಯು ತುಂಬ ಪಾರದರ್ಶಕವಾಗಿ ನಡೆದು ಸೌಲಭ್ಯವು ನೇರವಾಗಿ ಕಾರ್ಮಿಕರ ಮಕ್ಕಳಿಗೆ ತಲುಪುತ್ತದೆಂದು ಮಂಡಳಿಯ ಕಾರ್ಯದರ್ಶಿರವರು ಮಾನ್ಯ ಅಧ್ಯಕ್ಷರ ಹಾಗೂ ಸಭೆಯ ಸದಸ್ಯರ ಗಮನಕ್ಕೆ ತಂದರು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮಾತನಾಡಿ ಈ ಯೋಜನೆಯ ಅಭಿವೃದ್ಧಿಗಾಗಿ ಸೆಂಟ್ರಲ್ ಇ-ಗರ್ವನನ್ಸ್ ಡಿಪಿಎಆರ್‌ಗೆ ಕೋರಲಾಗಿದೆ ಎಂದು ತಿಳಿಸಿದರು.

ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಸಹಾಯಧನ ಸೌಲಭ್ಯವನ್ನು ಸದರಿ ಪೋರ್ಟ್‌ಲ್‌ನಲ್ಲಿ ಅಳವಡಿಸಿದರೂ ಹಾಗೂ  ಫಲಾನುಭವಿಗಳ ಮಕ್ಕಳು ಇತರೆ SC/ST/OBC ವರ್ಗಗಳಡಿ ಶೈಕ್ಷಣಿಕ ಧನಸಹಾಯ ಪಡೆಯುತಿದ್ದರೂ ಸಹ ಮಂಡಳಿಯಲ್ಲಿ ಚಾಲ್ತಿಯಲ್ಲಿ ಇರುವ ನೋಂದಾಯಿತ ಕಟ್ಟಡ ಕಾರ್ಮಿಕರ (ಫಲಾನುಭವಿಯ) ಎರಡು ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ನೀಡಲು ಕಾಯ್ದೆಯಡಿ ಯಾವುದೇ ನಿರ್ಬಂಧ ಇರುವುದಿಲ್ಲವೆಂದು ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

ಮಂಡಳಿಯಿಂದ ಈಗಾಗಲೇ ವಿವಿಧ ಸೌಲಭ್ಯಗಳಡಿ ನೀಡಲಾಗುತ್ತಿರುವ ಸಹಾಯಧನದ ಮೊತ್ತವನ್ನು ಹೆಚ್ಚಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸೌಲಭ್ಯಗಳ ಸಹಾಯಧನದ ಮೊತ್ತವನ್ನು ಈ ಕೆಳಗಿನಂತೆ ಹೆಚ್ಚಿಸಲು ತೀರ್ಮಾನಿಸಲಾಯಿತು.

| Sl.No. | Name of the Educational course or Standard or Grade | Old Rates of Educational Assistance | | RevicedAnnual Educational Assistance (in Rs.) |
|---|---|---|---|---|
| | | Boys | Girls | Pre-matric Courses |
| 1 | KG/ Pre School/ Nursery (Age 3 to 5) | 3,000 | 4,000 | 5,000 |
| 2 | 1st- 4th Std | 3,000 | 4,000 | 5,000 |
| 3 | 5th- 8th Std | 5,000 | 6,000 | 8,000 |
| 4 | 9th& 10th Std | 10,000 | 11,000 | 12,000 |
| | **Post- matric / HSC** | | | |
| 5 | 1st PUC &IInd PUC | 10,000 | 14,000 | 15,000 |
| 6 | Polytechnic / Diploma /ITI | 12,000 | 15,000 | 20,000 |
| 7 | Bsc Nursing/ GNM /ANM/ Paramedical Courses | 15,000 | 20,000 | 40,000 |
| 8 | D.ed | 10,000 | 11,000 | 25,000 |
| | B.ed | 15,000 | 20,000 | 35,000 |
| 9 | Graduation (Any discipline) | | | 25,000 |
| 10 | LLB / LLM | | | 30,000 |
| 11 | Any Post Graduation | 20,000 | 20,000 | Rs. 35,000/- for maximum of 2 years subject |
| | **Technical / Medical through NEET or KCET** | | | |
| 12 | BE/B.Tech or equivalent U.G courses. | 25,000 | 25,000 | Rs. 50,000/- subject to the maximum number of the years course |
| 13 | M.Tech / ME (or equivalent Post Graduation courses. | 30,000 | 35,000 | Rs. 60,000/- subject to the maximum of number of the years course. |
| 14 | Medical (MBBS/ BAMS/ BDS/ BHMS or equivalent course of Medical Studies) | 30,000 | 30,000 | Rs. 60,000/- (subject to the maximum of number of the years course) |

| | | | | |
|---|---|---|---|---|
| | MD | 45,000 | 55,000 | Rs. 75,000/- (subject to the maximum of number of the years course) |
| 15 | Ph.D /M.Phil (Any Subject) | 25,000 | 30,000 | Rs. 25,000/- for maximum of 3 years for P.hd and 1 year for M.phil (Those candidates who have been selected for Junior Research Fellowship (JRF) of UGC or who are in the employment of the State / Central Government or working in Aided colleges in the posts covered under the grant in Aid schemes of UGC Colleges **are not eligible** for this assistance). |
| 16 | IIT/ IIIT / IIM/ NIT/IISER/ AIIMS / NLU and listed courses of Government of India. | Actual Tuition fee paid including application fee | | |

**Conditions:**

The amount shall be sanctioned as stipulated under the provisions of Rule 45 of the Karnataka Rules, 2006.

1. 45-(1) The Secretary or any other officer authorized in this behalf by the Board, may on an application from a registered construction worker, sanction every year for their dependent children not exceeding two children, annual educational assistance (Kalike Bhagya).

2. 45-(4) Educational assistance shall be available for the current enrolment and only for the students enrolled in regular courses in recognized institutions 1 [X XXX X]. Distance Education Courses. Home study Courses online Courses, etc. are not eligible to avail this benefit].

3. The students should have passed previous academic year and should have enrolled for the current academic year.

4. Further, the scholarship may be disbursed through DBT Mode on State scholarship Portal (SSP) designed by the Centre for e-Governance, Government of Karnataka.

5. The actual processing fee for successful applications will be reimbursed in case of Sl.No.16.

6. Students pursuing the above courses in any discipline / Branches or studies equivalent to the above courses are also eligible for the scholarship applicable to their respective course.

7. Registered construction workers whose membership is valid at the time of submitting the application for educational assistance and whose children have enrolled for the above courses are eligible for scholarship.

8. Students appearing for the various examinations through the National Institute of Open Schooling shall be reimbursed the actual examination fees of the specific course.

ಮುಂದುವರೆದು ಈಗಾಗಲೇ ಪಾವತಿಸುತ್ತಿರುವ ಇತರೆ ಧನಸಹಾಯಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲು ತೀರ್ಮಾನಿಸಲಾಯಿತು.

| ಕ್ರ.ಸಂ | ಸೌಲಭ್ಯದ ವಿವರ | ಪ್ರಸ್ತುತ ದರ ರೂ. | | ಪರಿಷ್ಕರಿಸಿದ ದರ ರೂ. | |
|---|---|---|---|---|---|
| 1 | ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ) | 300 ರಿಂದ 10,000 ವರೆಗೆ | | 300 ರಿಂದ 20,000 ವರೆಗೆ | |
| 2 | ಮದುವೆ ಸಹಾಯಧನ | 50,000 | | 60,000 | |
| 3 | ಪಿಂಚಣಿ ಸೌಲಭ್ಯ | 2000 | | 3000 | |
| 4 | ಕುಟುಂಬ ಪಿಂಚಣಿ | 1000 | | 2000 | |
| 5 | ಹೆರಿಗೆ ಸೌಲಭ್ಯ | ಗಂಡು | ಹೆಣ್ಣು | ಗಂಡು | ಹೆಣ್ಣು |
| | | 20,000 | 30,000 | 25,000 | 35,000 |
| 6 | ಅಂತ್ಯಕ್ರಿಯೆ ವೆಚ್ಚ | 54000 | | 75000 | |

ಮದುವೆ ಸಹಾಯಧನವನ್ನು ವಿತರಿಸುವ ಪ್ರಕರಣಗಳಲ್ಲಿ ಪರಿಹಾರದ ಮೊತ್ತವನ್ನು ಫಲಾನುಭವಿಯ ಪೋಷಕರಿಗೆ (ತಂದೆ-ತಾಯಿ) ನೀಡುವುದು ಅದರಲ್ಲಿಯೂ ಮದುವೆಯಾಗುವ ಮಕ್ಕಳ ತಾಯಿಗೆ ಪ್ರಾಮುಖ್ಯತೆಯನ್ನು ನೀಡುವುದೆಂದು, ಒಂದು ವೇಳೆ ಫಲಾನುಭವಿಯು ತನ್ನ ಮಕ್ಕಳ ಮದುವೆ ಸಹಾಯಧನಕ್ಕಾಗಿ ಕೋರಿದ ಪ್ರಕರಣಗಳಲ್ಲಿ ಫಲಾನುಭವಿಯ ಧರ್ಮ ಪತ್ನಿಗೆ

ಸಹಾಯಧನವನ್ನು ವಿತರಿಸುವುದು ಎಂದು ಮಾನ್ಯ ಅಧ್ಯಕ್ಷರು ತಿಳಿಸಿದರು. ಅದಕ್ಕೆ ಸಭೆಯ ಸದಸ್ಯರೆಲ್ಲರೂ ಅನುಮೋದಿಸಿದರು.

ಈ ಮೇಲಿನ ಪರಿಷ್ಕೃತ ದರಗಳು ದಿನಾಂಕ: 01/07/2021 ರಿಂದಲೇಜಾರಿಗೆ ಬರತಕ್ಕವು ಎಂದು ಅಧ್ಯಕ್ಷರು ಸೂಚಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಿತು.
ಎಲ್ಲಾ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಇ.ಎಸ್.ಐ ವೈದ್ಯಕೀಯ ಸೌಲಭ್ಯ ನೀಡಲು ತೀರ್ಮಾನಿಸಲಾಯಿತು ಹಾಗೂ ವೈದ್ಯಕೀಯ ವೆಚ್ಚದ ಬಿಲ್‌ಗಳನ್ನು ಆರೋಗ್ಯ ಇಲಾಖೆಯಿಂದ ಅಥವಾ ಇ.ಎಸ್.ಐ. ಅಧಿಕಾರಿಗಳಿಂದ ದೃಢೀಕರಿಸಲು ನಿರ್ಧರಿಸಲಾಯಿತು.

ರಾಜ್ಯದೆಲ್ಲೆಡೆ ಬಾಕಿ ಇರುವ ಎಲ್ಲ ಸೌಲಭ್ಯದ ಅರ್ಜಿಗಳನ್ನು ದಿನಾಂಕ: 31.08.2021 ರೊಳಗಾಗಿ ವಿಲೇವಾರಿ ಮಾಡಲು ತಿಳಿಸಲಾಯಿತು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಈ ಮೇಲಿನಂತೆ ಸೌಲಭ್ಯದ ದರಗಳನ್ನು ಪರಿಷ್ಕರಿಸಲು, ಇ.ಎಸ್.ಐ ವೈದ್ಯಕೀಯ ಸೌಲಭ್ಯ ಒದಗಿಸಲು, ಬಾಕಿ ಇರುವ ಎಲ್ಲ ಸೌಲಭ್ಯದ ಅರ್ಜಿಗಳನ್ನು ದಿನಾಂಕ: 30.09.2021 ರೊಳಗಾಗಿ ಕಾರ್ಮಿಕ ಅದಾಲತ್ ನಡೆಸುವ ಮೂಲಕ ವಿಲೇವಾರಿ ಮಾಡುವ ವಿಷಯಗಳ ಬಗ್ಗೆ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.**

## ವಿಷಯ ಸಂಖ್ಯೆ-10

**ಮಂಡಳಿಯ 2021 -2022 ನೇ ಸಾಲಿನ ಆಯವ್ಯಯದಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ (Higher Education- Class 10th,11th& 12th, ಡಿಪ್ಲೋಮಾ, ಪದವಿ ಮತ್ತು ಸ್ನಾತಕೋತ್ತರ, ವಿದ್ಯಾರ್ಥಿಗಳಿಗೆ) ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಉದ್ದೇಶಿಸಿ ಮೀಸಲಿಟ್ಟಿರುವ ಮೊತ್ತದಲ್ಲಿ 1 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರೀ-ಲೋಡೆಡ್ ಪಠ್ಯಕ್ರಮವುಳ್ಳ ಟ್ಯಾಬ್‌ಗಳನ್ನು ಮತ್ತು ಪಿಯುಸಿ -1 ಮತ್ತು 2, ವಿವಿಧ ತಾಂತ್ರಿಕ ಮತ್ತು ಪ್ರೊಫೆಷನಲ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ವಿತರಿಸಲು ಅನುಮೋದನೆ ನೀಡುವ ಬಗ್ಗೆ.**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಮತ್ತು ಕರ್ನಾಟಕ ನಿಯಮಗಳು 2006ರ ಅನ್ವಯ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿಯು ರಚನೆಗೊಂಡಿರುತ್ತದೆ. ಕಾಯ್ದೆಯ ಕಲಂ-22 ರಲ್ಲಿ ಮಂಡಳಿಯ ಕಾರ್ಯವಿಧಾನಗಳಡಿ ಈ ಕೆಳಕಂಡಂತೆ ಉಲ್ಲೇಖಿಸಿರುತ್ತದೆ.

*22. Functions of the Boards.-*

*(1) (e) Give such financial assistance for the education of children of the beneficiaries as may be prescribed;*

*(h) The Board may make provision and improvement of such other welfare measures and facilities as may be prescribed;*

ಮಂಡಳಿಯಲ್ಲಿ ಸಂಗ್ರಹವಾಗುವ ಸುಂಕದ ಮೊತ್ತವನ್ನು ಉಪಯೋಗಿಸುವ ಬಗ್ಗೆ ಕೇಂದ್ರ ಸರ್ಕಾರವು ಕಾಯ್ದೆಯ ಕಲಂ-60ರಡಿ ಆಗಿಂದಾಗ್ಗೆ ನಿರ್ದೇಶನಗಳನ್ನು ನೀಡುತ್ತಾ ಬಂದಿದ್ದು ಅದರಂತೆ ಕೇಂದ್ರ ಸರ್ಕಾರದ ಸುತ್ತೋಲೆಯ ಅನ್ವಯ ಈ ಕೆಳಕಂಡಂತೆ ನಿರ್ದೇಶನವನ್ನು ನೀಡಿರುತ್ತದೆ.

***" Whereas, Section 22 (h) does not allow diversion from BOCW Cess fund for any purpose other than for welfare of BOCW workers and their families exclusively".***

ಮೇಲ್ಕಂಡ ಆದೇಶ ಮತ್ತು ಕಾಯ್ದೆಗಳಂತೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುವ ವಿವಿಧ 52 ವರ್ಗದ ಕಾರ್ಮಿಕರನ್ನು ಮಂಡಳಿಯ ಫಲಾನುಭವಿಗಳನ್ನಾಗಿ ನೋಂದಾಯಿಸಿಕೊಂಡು ಅವರಿಗೆ ಮತ್ತು ಅವರ ಅವಲಂಬಿತರಿಗೆ 19 ವಿವಿಧ ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಿ ಈ ಮಂಡಳಿಯಿಂದ ಜಾರಿಗೊಳಿಸಲಾಗುತ್ತಿದೆ. ಸದರಿ 19 ವಿವಿಧ ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳೊಂದಿಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ (ಡಿಪ್ಲೋಮಾ, ಐಟಿಐ, ಪದವಿ ಮತ್ತು ಸ್ನಾತಕೋತ್ತರ ಪದವಿ) ಲ್ಯಾಪ್‌ಟಾಪ್ ವಿತರಿಸುವ ಉದ್ದೇಶದಿಂದ ಮಂಡಳಿಯ 2020-21ನೇ ಸಾಲಿನ ಆಯವ್ಯಯದಲ್ಲಿ ಲ್ಯಾಪ್‌ಟಾಪ್ ವಿತರಣೆಯ ಯೋಜನೆಗಾಗಿ ರೂ.50 ಕೋಟಿಗಳನ್ನು ಮೀಸಲಿಟ್ಟು ದಿನಾಂಕ:23-03-2020ರಂದು ನಡೆದ ಮಂಡಳಿಯ 29ನೇ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿರುತ್ತದೆ ಮತ್ತು ದಿನಾಂಕ:20-05-2020 ರಂದು ಸರ್ಕಾರದಿಂದ ಸಹ ಅನುಮೋದನೆಯನ್ನು ಪಡೆದುಕೊಳ್ಳಲಾಗಿರುತ್ತದೆ.

ಅದೇ ರೀತಿ ಮಂಡಳಿಯ 2021-22ನೇ ಸಾಲಿನ ಆಯವ್ಯಯದಲ್ಲಿ ಲ್ಯಾಪ್‌ಟಾಪ್ ವಿತರಣೆ **(Higher Education- Class $10^{th}$,$11^{th}$& 12th,** ಡಿಪ್ಲೋಮಾ, ಪದವಿ ಮತ್ತು ಸ್ನಾತಕೋತ್ತರ, ವಿವಿಧ ತಾಂತ್ರಿಕ ಮತ್ತು ಪ್ರೊಫೆಷನಲ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ) ಯೋಜನೆಗಾಗಿ ರೂ.60 ಕೋಟಿಗಳನ್ನು ಮೀಸಲಿಟ್ಟು ದಿನಾಂಕ:18-02-2021ರಂದು ನಡೆದ ಮಂಡಳಿಯ 32ನೇ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿರುತ್ತದೆ.

ಮಂಡಳಿಯ ನೋಂದಾಯಿತ ಕಾರ್ಮಿಕರ ಮಕ್ಕಳ ಪೈಕಿ 01 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ Pre-loaded Syllabus Content Tab ಮತ್ತು ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಹಾಗೂ ಇತರೆ ಪ್ರೊಫೆಷನಲ್ ಕೋರ್ಸಸ್ ಮಾಡುತ್ತಿರುವ ಮಕ್ಕಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡಲು ಉದ್ದೇಶಿಸಲಾಗಿರುತ್ತದೆ.

ಪ್ರಸ್ತುತ ಕೋವಿಡ್-19ರ ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಶಾಲೆಗಳು ಪ್ರಾರಂಭವಾಗದೇ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಲಾಗುತ್ತಿದ್ದು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕೋವಿಡ್-19ರ ಅಲೆಯ ತೀವ್ರತೆಯನ್ನು ತಡೆಗಟ್ಟುವ ಹಿನ್ನಲೆಯಲ್ಲಿ ಸರ್ಕಾರದಿಂದ ಘೋಷಿಸಲಾದ ಲಾಕ್‌ಡೌನ್‌ನಿಂದಾಗಿ ಈಗಾಗಲೇ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುತ್ತಾರೆ. ಆದ್ದರಿಂದ ಸದರಿಯವರ ಮಕ್ಕಳಿಗೆ ತರಗತಿಗೆ ಅನುಗುಣವಾಗಿ ಟ್ಯಾಬ್/ಲ್ಯಾಪ್‌ಟಾಪ್ ಗಳನ್ನು ಮಂಡಳಿಯ ವತಿಯಿಂದ ನೀಡಿದಲ್ಲಿ ಸದರಿಯವರುಗಳಿಗೆ ಆನ್‌ಲೈನ್ ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ ಹಾಗೂ ಕಾರ್ಮಿಕರಿಗೆ ಆರ್ಥಿಕವಾಗಿ ಸಹಾಯ

ಒದಗಿಸಿದಂತಾಗುತ್ತದೆ. ಅದರಂತೆ 01 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ Pre-loaded Syllabus Content Tab ಮತ್ತು ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಹಾಗೂ ಇತರೆ ಪ್ರೊಫೆಷನಲ್ ಕೋರ್ಸಸ್ ಮಾಡುತ್ತಿರುವ ಮಕ್ಕಳಿಗೆ ಲ್ಯಾಪ್ ಟಾಪ್‌ಗಳನ್ನು ನೀಡಲು ಸದರಿ ವಿಷಯವನ್ನು ಕಾರ್ಯದರ್ಶಿಗಳು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಮಂಡಿಸಿದರು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-11

**2020-2021 ಹಾಗೂ 2021-2022 ನೇ ಸಾಲಿನ ಆಯವ್ಯಯದಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ Student School Kit (ಸ್ಕೂಲ್ ಕಿಟ್) ವಿತರಣೆ ಗಾಗಿ ಅನುದಾನ ಮೀಸಲಿಟ್ಟಿದ್ದು, ಸದರಿ ಕಿಟ್‌ಗಳನ್ನು ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಯಾದ ಎಮ್.ಎಸ್.ಐ.ಎಲ್ (M.S.I.L) ನಿಂದ ಖರೀದಿಸಿ, ವಿತರಣೆ ಮಾಡಲು ಅನುಮೋದನೆ ನೀಡುವ ಬಗ್ಗೆ.**

2020-21 ಹಾಗೂ 2021-2022 ನೇ ಸಾಲಿನ ಆಯವ್ಯಯದಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಕಲ್ಯಾಣ ಮಂಡಳಿಯಿಂದ Students Essential SchoolKit (ಸ್ಕೂಲ್ ಕಿಟ್) ವಿತರಣೆಗಾಗಿ ಅನುದಾನ ಮೀಸಲಿಟ್ಟಿದ್ದು, ಈಗಾಗಲೇ 2020-21ನೇ ಸಾಲಿನ ಆರ್ಥಿಕ ವರ್ಷ ಮುಗಿದಿದ್ದು, ಪ್ರಸ್ತುತ 2021-22ನೇ ಆರ್ಥಿಕ ವರ್ಷ ಪ್ರಾರಂಭವಾಗಿ ಮೊದಲ ತ್ರೈಮಾಸಿಕ ಅವಧಿಯು ಪೂರ್ಣಗೊಂಡಿರುತ್ತದೆ. 2020-21ನೇ ಸಾಲಿನಲ್ಲಿ ಕೋವಿಡ್-19 ಮೊದಲನೇಯ ಅಲೆಯ ಹಿನ್ನಲೆಯಲ್ಲಿ ಸದರಿ ಯೋಜನೆಯ ಅನುಷ್ಠಾನವು ವಿಳಂಬವಾಗಿದ್ದು ಪ್ರಸ್ತುತ ವರ್ಷದ ಶಾಲೆಗಳು ಜುಲೈ ತಿಂಗಳಲ್ಲಿ ಪ್ರಾರಂಭಗೊಳ್ಳುವ ಸಾಧ್ಯತೆಯಿರುವ ಹಿನ್ನಲೆಯಲ್ಲಿ ಸದರಿ Students Essential SchoolKit (ಸ್ಕೂಲ್ ಕಿಟ್) ಗಳನ್ನು ಟೆಂಡರ್ ಮೂಲಕ ಪಡೆದು ಕೊಳ್ಳಲು ವಿಳಂಬವಾಗುವ ಸಂಭವವಿರುವುದರಿಂದ ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಯಾದ ಎಮ್.ಎಸ್.ಐ.ಎಲ್ ನಿಂದ ಖರೀದಿಸಿ, ವಿತರಿಸಲು ಅನುಮೋದನೆಗಾಗಿ ಮಂಡಿಸಿದೆ. ಆದುದರಿಂದ ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕಾಗಿ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ್ದು, ಶಿಕ್ಷಣ ಇಲಾಖೆಯಿಂದ Students Essential School Kit (ಸ್ಕೂಲ್ ಕಿಟ್) ಗಳಲ್ಲಿ ಇರುವಂತಹ ಸಾಮಗ್ರಿಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ವಿತರಿಸಲು ಒಪ್ಪಿ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-12

**ಸರ್ಕಾರದ ಆದೇಶದಂತೆ ಇಂದಿರಾ ಕ್ಯಾಂಟೀನ್ ಸೌಲಭ್ಯವನ್ನು ಪಡೆಯುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಆಹಾರ ಪೂರೈಕೆಗಾಗಿ ಮಂಡಳಿವತಿಯಿಂದ ಭರಿಸಬೇಕಾದ ಮೊತ್ತದಲ್ಲಿ ಮೊದಲ ಹಂತದಲ್ಲಿ ರೂ.8.85 ಕೋಟಿ ಮೊತ್ತವನ್ನು ಇಂದಿರಾ ಕ್ಯಾಂಟೀನ್‌ಗೆ ಪಾವತಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ**

ಸರ್ಕಾರದ ಆದೇಶ ಸಂಖ್ಯೆ:ನಅಇ.301.ಎಸ್.ಎಫ್.ಸಿ.2017, ದಿನಾಂಕ:23-10-2017ರಲ್ಲಿ ಇಂದಿರಾ ಕ್ಯಾಂಟೀನ್ ಆಹಾರ ಪೂರೈಕೆಗೆ ಕಾರ್ಮಿಕ ಇಲಾಖೆ ವತಿಯಿಂದ ಶೇ.30 ರಷ್ಟನ್ನು ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಿಂದ ಭರಿಸುವುದಾಗಿ ಆದೇಶಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ "ಸುಂಕ ನಿಧಿ" ಯಿಂದ 2018-19 ಮತ್ತು 2019-20ನೇ ಸಾಲಿಗೆ ಒಟ್ಟು ರೂ.70.80 ಕೋಟಿಗಳನ್ನು ಬಿಡುಗಡೆ ಮಾಡಲು ಕಾರ್ಯದರ್ಶಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಇವರಿಗೆ ಅನುಮತಿ ನೀಡಲಾಗಿದೆ ಹಾಗೂ ಕೂಡಲೇ ಮೊದಲನೇ ಕಂತಿನ ಅನುದಾನವಾಗಿ ರೂ.35.40 ಕೋಟಿಗಳನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಬಿಡುಗಡೆ ಮಾಡಲು ಆದೇಶಿಸಲಾಗಿದೆ. ಮುಂದುವರೆದು, ನಗರಾಭಿವೃದ್ಧಿ ಇಲಾಖೆಯು ಇಂದಿರಾ ಕ್ಯಾಂಟೀನ್ ಸೌಲಭ್ಯವನ್ನು ಬಳಸುವ ಶೇಕಡವಾರು ಕಟ್ಟಡ ಕಾರ್ಮಿಕರ ಸಂಖ್ಯೆಯ ನಿಖರವಾದ ಮಾಹಿತಿಯನ್ನು ನೀಡುವುದು. ಮುಂದಿನ ಕಂತಿನ ಅನುದಾನವನ್ನು ಕಟ್ಟಡ ಕಾರ್ಮಿಕರ ಶೇಕಡವಾರು ಸಂಖ್ಯೆಯನ್ನು ಆಧರಿಸಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿರುತ್ತದೆ.

ಮುಂದುವರೆದು, ಇಂದಿರಾ ಕ್ಯಾಂಟೀನ್ ಸೌಲಭ್ಯವನ್ನು ಪಡೆಯುತ್ತಿರುವ ಕಟ್ಟಡ ಕಾರ್ಮಿಕರ ಬಗ್ಗೆ ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಲಾಗಿರುತ್ತದೆ.

1. ಎಷ್ಟು ಕಟ್ಟಡ ಕಾರ್ಮಿಕರು ಇಂದಿರಾ ಕ್ಯಾಂಟೀನ್ ಸೌಲಭ್ಯವನ್ನು ಪಡೆಯುತ್ತಿದ್ದಾರೆ ಎಂಬ ಬಗ್ಗೆ ಮಾದರಿ ಸಮೀಕ್ಷೆಯನ್ನು(Sample Survey) Public Affairs Centre or ISEC ಮೂಲಕ ಕೈಗೊಳ್ಳಬಹುದಾಗಿದೆ.

2. ಮೊದಲನೇ ಕಂತಿನ ರೂ.35.40 ಕೋಟಿಗಳಲ್ಲಿ ಶೇ.25ರಷ್ಟನ್ನು ಅಂದರೆ ರೂ.8.85 ಕೋಟಿಗಳನ್ನು ಮಂಡಳಿಯ ಮೂಲಕ ನಗರಾಭಿವೃದ್ಧಿ ಇಲಾಖೆಗೆ ನಿಯಮಾನುಸಾರ ಬಿಡುಗಡೆ ಮಾಡುವುದು. ಉಳಿದ ಶೇ.75ರಷ್ಟನ್ನು ಸಮೀಕ್ಷೆಯ ತರುವಾಯ ಬಿಡುಗಡೆ ಗೊಳಿಸಬಹುದಾಗಿದೆ ಎಂದು ತಿಳಿಸಿರುತ್ತದೆ.

ಆದಕಾರಣ, ಸರ್ಕಾರದ ಆದೇಶದನ್ವಯ ದಿನಾಂಕ:16-06-2021ರಂದು ಮಂಡಳಿಯಿಂದ ರೂ.8,85,00,000/-ಗಳನ್ನು ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಹಾಗಾಗಿ, ಸದರಿ ಮೊತ್ತಕ್ಕೆ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ಕೋರಿದೆ. ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ ಸಂಪುಟ ಸಭೆಯಲ್ಲಿ ತೀರ್ಮಾನಿಸಿದಂತೆ ಶೇ.25 ರಷ್ಟು**

**ಮೊತ್ತ ರೂ.8,85,00,000/-ಗಳನ್ನು ಇಂದಿರಾ ಕ್ಯಾಂಟಿನ್‌ಗೆ ಪಾವತಿಸಬಹುದಾಗಿರುತ್ತದೆಂದು ಹಾಗೂ ಸಮೀಕ್ಷೆಯ ನಂತರ ಅಗತ್ಯ ಮಾಹಿತಿ ಪಡೆದು ಉಲ್ಲೇಖಿತ ಸರ್ಕಾರದ ಆದೇಶದಂತೆ ಅಧ್ಯಕ್ಷರ ಅನುಮೋದನೆಯೊಂದಿಗೆ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಸಭೆಯು ಸರ್ವಾನುಮತದಿಂದ ಒಪ್ಪಿ ಘಟನೋತ್ತರ ಅನುಮೋದನೆ ನೀಡಿತು.**

## <u>ವಿಷಯ ಸಂಖ್ಯೆ-13</u>

**ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಂಡಳಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದನೆ ನೀಡುವ ಬಗ್ಗೆ.**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು 2007 ರಲ್ಲಿ ಪ್ರಾರಂಭವಾದಾಗಿನಿಂದಲೂ ಖಾಯಂ ಸಿಬ್ಬಂದಿಯನ್ನು ಹೊಂದಿರದ ಕಾರಣ ಹಾಗೂ ಸಿ&ಆರ್ ನಲ್ಲಿ ಮಂಜೂರಾದ ಹುದ್ದೆಗಳು ಖಾಲಿ ಇರುತ್ತವೆ. ಮಂಡಳಿಯಲ್ಲಿ ಹೊಸ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಮಂಡಳಿಯ ಕಾರ್ಯವ್ಯಾಪ್ತಿಯು ವಿಸ್ತಾರವಾಗುತ್ತಿದ್ದು ಸಮರ್ಪಕ ಕಾರ್ಯನಿರ್ವಹಣೆಗೆ ಸೂಕ್ತ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.

ಆದಕಾರಣ ಮಂಡಳಿಯ ಕೆಲಸ ಕಾರ್ಯಗಳನ್ನು ನಿಗದಿತ ಅವಧಿಯಲ್ಲಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವಾಗುವುದರಿಂದ ಅನುಮೋದನೆಗೊಂಡು ಮಂಜೂರಾಗಿ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ Cadre & Recruitment (C&R) Rule ಪ್ರಕಾರ ಶಾಸನಬದ್ಧ ಮೀಸಲಾತಿಯನ್ನು ಒದಗಿಸಿ ಭರ್ತಿ ಮಾಡಿಕೊಳ್ಳಲು ಸದರಿ ವಿಷಯವನ್ನು ಅನುಮೋದನೆಗಾಗಿ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಸದರಿ ವಿಷಯದ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು.ಈ ವಿಷಯದಲ್ಲಿ ಮುಂದಿನ ನಿರ್ಧಾರ ಕೈಗೊಳ್ಳಲು ಸಭೆಯು ಅಧ್ಯಕ್ಷರಿಗೆ ಪೂರ್ಣ ಅಧಿಕಾರ ನೀಡಿ ಸರ್ವಾನುಮತದಿಂದ ಅನುಮೋದಿಸಿತು.**

## <u>ವಿಷಯ ಸಂಖ್ಯೆ-14</u>

**ಮಂಡಳಿಯ 2 ಹಳೆಯ ವಾಹನಗಳನ್ನು ವಿಲೇವಾರಿ ಮಾಡಿ ಮಂಡಳಿಯ ಅಧಿಕಾರಿಗಳಿಗೆ 2 ಹೊಸ ವಾಹನಗಳನ್ನು ಕಛೇರಿ ಕೆಲಸಕ್ಕೆ ಆಡಳಿತಾತ್ಮಕ ವೆಚ್ಚದಲ್ಲಿ ಖರೀದಿಸಲು ಅನುಮೋದನೆ ನೀಡುವ ಬಗ್ಗೆ.**

ಮಂಡಳಿಯ ವಾಹನ ಸಂಖ್ಯೆ ಕೆಎ-05 ಎಂ.ಇ 3598 (ಹೊಂಡೈಯ್ ವೆರ್ಣ) ಹಾಗೂ ವಾಹನ ಸಂಖ್ಯೆ ಕೆಎ-01 ಎಂ.ಎಫ್ 7451 (ಫೋರ್ಡ್) ವಾಹನಗಳನ್ನು ಮಂಡಳಿಯ ಅಧಿಕಾರಿಗಳು ಉಪಯೋಗಿಸುತ್ತಿದ್ದು, ವಾಹನಗಳು ತುಂಬಾ ಹಳೆಯದಾಗಿರುತ್ತವೆ. ಈ ವಾಹನಗಳನ್ನು ಮೇಲಿಂದ ಮೇಲೆ ದುರಸ್ಥಿ ಮಾಡಿಸಬೇಕಾಗಿರುವುದರಿಂದ ವಾಹನಗಳ ನಿರ್ವಹಣೆಯ ವೆಚ್ಚವು ತುಂಬಾ ದುಬಾರಿಯಾಗುತಿರುತ್ತದೆ.

ಮಂಡಳಿಯ ಎರಡು ಹಳೆಯ ವಾಹನಗಳನ್ನು ವಿಲೇವಾರಿ ಮಾಡಿ ಮಂಡಳಿಯ ಅಧಿಕಾರಿಗಳಿಗೆ ಎರಡು ಹೊಸವಾಹನಗಳನ್ನು ಕಛೇರಿಯ ಕೆಲಸಕ್ಕೆ ಆಡಳಿತಾತ್ಮಕ ವೆಚ್ಚದಲ್ಲಿ ಖರೀದಿಸಲು ಸದರಿ ವಿಷಯವನ್ನು ಅನುಮೋದನೆಗಾಗಿ ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಗಳ ಮಂಡಿಸಿದರು.

ತೀರ್ಮಾನ:

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ್ದು, ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಮಾತನಾಡುತ್ತಾ ವಾಹನವನ್ನು ಖರೀದಿಸಲು ತಗಲುವ ವೆಚ್ಚವನ್ನು ಆಡಳಿತಾತ್ಮಕ ವೆಚ್ಚದಿಂದ ಭರಿಸಲು ಸೂಚಿಸಿದರು. ಹಾಗೂ ಇದಕ್ಕೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ-15

**ಮೈಸೂರು, ಮಂಡ್ಯ, ಹಾಸನ, ತುಮಕೂರು, ಕಲ್ಬುರ್ಗಿ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿರುವ ಕಾರ್ಮಿಕ ಇಲಾಖೆಯ ಕಛೇರಿಗಳ ಕಟ್ಟಡಗಳ ಮಹಡಿಯಲ್ಲಿ ಮಂಡಳಿಯ ಸೇವೆ ಸೌಲಭ್ಯಗಳನ್ನು ಒದಗಿಸಲು ಮತ್ತು ಕುಂದುಕೊರತೆಗಳನ್ನು ಆಲಿಸುವ ಉದ್ದೇಶಕ್ಕಾಗಿ ಕಛೇರಿಗಳನ್ನು ನಿರ್ಮಿಸಲು ಮತ್ತು ನಿವೇಶನ ಪಡೆಯಲು ಹಾಗೂ ಈ ವೆಚ್ಚವನ್ನು ಆಡಳಿತಾತ್ಮಕ ವೆಚ್ಚದಿಂದ ಭರಿಸಲು ಅನುಮೋದನೆ ನೀಡುವ ಬಗ್ಗೆ.**

ಮೈಸೂರು, ತುಮಕೂರು ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಕಾರ್ಮಿಕ ಇಲಾಖೆಯ ಕಛೇರಿಯ ಕಟ್ಟಡಗಳಲ್ಲಿ ಮಂಡಳಿಯ ಸೇವೆ ಸೌಲಭ್ಯಗಳನ್ನು ಒದಗಿಸಲು ಮತ್ತು ಕುಂದು ಕೊರತೆಗಳನ್ನು ಆಲಿಸುವ ಉದ್ದೇಶಕ್ಕಾಗಿ ಮಂಡಳಿ ವತಿಯಿಂದ ಹೆಚ್ಚುವರಿ ಮಹಡಿಗಳನ್ನು ನಿರ್ಮಿಸಲು ಹಾಸನ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಮಂಡಳಿಯ ಸೇವೆ ಸೌಲಭ್ಯಗಳನ್ನು ಒದಗಿಸಲು ಮತ್ತು ಕುಂದುಕೊರತೆಗಳನ್ನು ಆಲಿಸುವ ಉದ್ದೇಶಕ್ಕಾಗಿ ನಿವೇಶನಗಳನ್ನು ಖರೀದಿಸಿ ಹೊಸದಾಗಿ ಕಟ್ಟಡ ನಿರ್ಮಿಸಲು ಅದೇ ರೀತಿ ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಮಂಡಳಿಯ ಸೇವೆ ಸೌಲಭ್ಯಗಳನ್ನು ಒದಗಿಸಲು ಮತ್ತು ಕುಂದುಕೊರತೆಗಳನ್ನು ಆಲಿಸುವ ಉದ್ದೇಶಕ್ಕಾಗಿ ನಿವೇಶನಗಳನ್ನು ಪಡೆದು ಹೊಸದಾಗಿ ಕಟ್ಟಡ ನಿರ್ಮಿಸಲು ಹಾಗೂ ಮೈಸೂರಿಗೆ ರೂ.5.00 ಕೋಟಿ, ತುಮಕೂರಿಗೆ ರೂ.3.00 ಕೋಟಿ, ಕಲಬುರಗಿಗೆ ರೂ.2.5 ಕೋಟಿ, ಹಾಸನಕ್ಕೆ ರೂ.3.00 ಕೋಟಿ ಮಂಡ್ಯಕ್ಕೆ ರೂ.2.00 ಕೋಟಿ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ತಲಾ ರೂ.2.00 ಕೋಟಿಯನ್ನು ನೀಡಲು ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಜರೂರು ಅಂದಾಜು ಪತ್ರಿಕೆ ತಯಾರಿಸಿ, ತಾಂತ್ರಿಕ / ಆಡಳಿತಾತ್ಮಕ ಮಂಜೂರಾತಿ ನೀಡಿ ಕಾರ್ಯವನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸಲು ಸಭೆಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಕಾರ್ಯದರ್ಶಿಗಳು ಮಂಡಿಸಿದರು.

ತೀರ್ಮಾನ:

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ, ಸರ್ವಾನುಮತದಿಂದ ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ-16

**ಕರ್ನಾಟಕ ಕಾರ್ಮಿಕ ಅಧ್ಯಯನ ಸಂಸ್ಥೆಯ ವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿ, ನವೀಕರಣ, ಮಂಡಳಿಯ ಯೋಜನೆಗಳು ಮತ್ತು ಕಾಯ್ದೆಯ ಕುರಿತು ಕಾರ್ಮಿಕ ಇಲಾಖೆ ಅಧಿಕಾರಿಗಳು, ಸಂಘ ಸಂಸ್ಥೆಗಳು ಮತ್ತು ಕಾರ್ಮಿಕರುಗಳಿಗೆ ತರಬೇತಿ ಮತ್ತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ರೂ.01 (ಒಂದು)ಕೋಟಿ ಮೊತ್ತದ ಅನುದಾನವನ್ನು ಬಿಡುಗಡೆ ಮಾಡಲು ಅನುಮೋದನೆ ನೀಡುವ ಬಗ್ಗೆ.**

ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಯು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕುರಿತು ಸಂಶೋಧನೆ, ಅವಶ್ಯಕವಾದ ಮಾಹಿತಿ ಸಂಗ್ರಹಣೆ ಹಾಗೂ ವಿಶ್ಲೇಷಣೆ ಬಗ್ಗೆ ಅಧ್ಯಯನ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಮಾಹಿತಿ ತಂತ್ರಜ್ಞಾನ ಹಾಗೂ ಡಿಜಿಟಲ್ ಗ್ರಂಥಾಲಯ ಸ್ಥಾಪನೆ ಮೂಲಕ ವಿವಿಧರೀತಿಯ ಕಟ್ಟಡಗಳ ನಿರ್ಮಾಣದ ಸುಂಕ ಮೊತ್ತದ ಬಗ್ಗೆ ಇಲಾಖಾ ಅಧಿಕಾರಿಗಳಿಗೆ ಮಾಹಿತಿ ಒದಗಿಸಲು, ಕಾನೂನಾತ್ಮಕವಾಗಿ ಹೊಸದಾಗಿ ಜಾರಿಗೆ ಬಂದಿರುವ ವಿವಿಧ ಬಗೆಯ ಲೇಬರ್ ಕೋಡ್‌ಗಳ ಮಾಹಿತಿ ಹಾಗೂ ಇವುಗಳಿಗೆ ಸಂಬಂಧಿಸಿದಂತೆ ತರಬೇತಿ ನೀಡಲು ಮಂಡಳಿವತಿಯಿಂದ ರೂ.2ಕೋಟಿ ಬಿಡುಗಡೆ ಮಾಡುವಂತೆ ಪತ್ರ ಸಂಖ್ಯೆ: ಕೆಎಸ್‌ಎಲ್‌ಐ/ಸಿಬ್ಬಂದಿ/40/2019-2020, ದಿನಾಂಕ: 03-06-2021 ರಲ್ಲಿಕೋರಿರುತ್ತಾರೆ.

ಅದರಂತೆ, ಪ್ರಸ್ತುತ ಕಾರ್ಮಿಕ ಅಧ್ಯಯನ ಸಂಸ್ಥೆಯ ವತಿಯಿಂದ ಕಟ್ಟಡ ಮತು್ತ ಇತರೆ ನಿರ್ಮಾಣ ಕಾರ್ಮಿಕರ ನೋಂದಣಿ, ನವೀಕರಣ, ಮಂಡಳಿಯ ಯೋಜನೆಗಳು ಮತ್ತು ಕಾಯ್ದೆಯ ಕುರಿತು ಕಾರ್ಮಿಕ ಇಲಾಖೆ ಅಧಿಕಾರಿಗಳು, ಸಂಘ ಸಂಸ್ಥೆಗಳು ಮತ್ತು ಕಾರ್ಮಿಕರುಗಳಿಗೆ ತರಬೇತಿ ಮತ್ತು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ರೂ.01 (ಒಂದು)ಕೋಟಿ ಮೊತ್ತದ ಅನುದಾನವನ್ನು ಬಿಡುಗಡೆ ಮಾಡಬಹುದಾಗಿರುತ್ತದೆ.

ಸದರಿ ವಿಷಯವನ್ನು ಅನುಮೋದನೆಗಾಗಿ ಸಭೆಯ ಅವಗಾಹನೆಗಾಗಿ ಹಾಗೂ ಸಭೆಯ ನಿರ್ಣಯಕ್ಕೆ ಮಂಡಿಸಿದರು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ,ರವರ ಪರವಾಗಿ ಹಾಜರಾಗಿದ್ದ ಶ್ರೀ ಅಬ್ದುಲ್ ಸತ್ತಾರ್ ಮಾತನಾಡುತ್ತಾ ತರಬೇತಿ ಕಾರ್ಯಕ್ರಮಗಳನ್ನು ಅವರ ವತಿಯಿಂದ ನಡೆಸಲು ಇಚ್ಛಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಮಂಡಳಿಯ ಕಾರ್ಯದರ್ಶಿಗಳು ಈ ಕುರಿತು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದಾಗ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆಎಂದು ತಿಳಿಸಿದರು. ಈ ಬಗ್ಗೆ ಪರಿಶೀಲಿಸಿ ನಿರ್ಣಯಿಸಲಾಗುವುದೆಂದು ಮಂಡಳಿಯ ಕಾರ್ಯದರ್ಶಿಗಳು ತಿಳಿಸಿದ್ದು, ರೂ.1.00 ಕೋಟಿ ಅನುದಾನವನ್ನು ಕಾರ್ಮಿಕ ಅಧ್ಯಯನ ಸಂಸ್ಥೆಗೆ ನೀಡಲುಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-17

**ಮಂಡಳಿಯಲ್ಲಿ ಸಂಗ್ರಹವಾಗಿರುವ ಸೆಸ್ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಬಗ್ಗೆ**

| ಕ್ರ. ಸಂ | FD ಇಟ್ಟಿರುವ ಖಾತೆ ಸಂಖ್ಯೆ | ಬ್ಯಾಂಕ್ ಗಳ ವಿವರಗಳು | No of FD's | FD ಇಟ್ಟಿರುವ ದಿನಾಂಕ | FD ಇಟ್ಟಿರುವ ಮೊತ್ತರೂ. | ಬಡ್ಡಿದರ |
|---|---|---|---|---|---|---|
| 1 | 1371401004604 (Linked to 79786 A/c) | ಕೆನರಾ ಬ್ಯಾಂಕ್ ಹೊಂಬೇಗೌಡನಗರ ಶಾಖೆ | 655 | 22.06.2020 ರಿಂದ 27.06.2021 ರವರಗೆ | 645,38,15,708/- | 5.20 % |
| 2 | 1371401004605 (Linked to 81360 A/c) | ಕೆನರಾಬ್ಯಾಂಕ್ ಹೊಂಬೇಗೌಡನಗರ ಶಾಖೆ | 06 | 12.10.2020 ರಿಂದ 27.06.2021 ರವರಗೆ | 6,00,00,000/- | 5.20 % |
| 3 | 1371401003636/3862 2020-21 ನೇ ಸಾಲಿನ ಠೇವಣಿಗಳು | ಕೆನರಾ ಬ್ಯಾಂಕ್ ಹೊಂಬೇಗೌಡನಗರ ಶಾಖೆ | 1148 | 12.09.2020 ರಿಂದ 27.06.2021 ರವರಗೆ | 1117,40,67,169/- | 5.20 % |
| 4 | 1371401004614/1 (Non-callable FD) | ಕೆನರಾ ಬ್ಯಾಂಕ್ ಹೊಂಬೇಗೌಡನಗರ ಶಾಖೆ | 01 | 29.06.2020 ರಿಂದ 29.06.2021 ರವರಗೆ | 4187,37,14,683/- | 4.10 % |
| 5 | 8402545110004000 (Non-callable FD) | ಬ್ಯಾಂಕ್ ಆಫ್ ಇಂಡಿಯಾ ವಿವಿ ಪುರಂ ಶಾಖೆ | 01 | 02.12.2020 ರಿಂದ 02.12.2021 ರವರಗೆ | 302,76,00,000/- | 3.15 % |
| 6 | 1371441000013/1 (Non-callable FD) | ಕೆನರಾಬ್ಯಾಂಕ್ ಹೊಂಬೇಗೌಡನಗರ ಶಾಖೆ | 01 | 20.06.2021 ರಿಂದ 20.06.2022 ರವರಗೆ | 500,00,00,00/- | 3.81 % |
| 7 | 73890100026129 | ಬ್ಯಾಂಕ್ ಆಫ್ ಬರೋಡ ಮೆಯೋ ಹಾಲ್ ಶಾಖೆ | 72 | 01.02.2021 ರಿಂದ ಒಂದು ವರ್ಷದ ಅವಧಿಗೆ | 89,50,00,000/- | 5.00 % |
| | ಒಟ್ಟು | | 1884 | | 6848,41,97,560/- | |

ಮಂಡಳಿಯ ಕಾರ್ಯದರ್ಶಿರವರು ಸದರಿ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದರು

**ತೀರ್ಮಾನ:**

**ಸದರಿ ವಿಷಯದ ಕೂಲಂಕಷವಾದ ಚರ್ಚೆಯ ನಂತರ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.**

**<u>ವಿಷಯ ಸಂಖ್ಯೆ-18</u>**

**ಕೆಲವು ಕಾರ್ಮಿಕ ಅಧಿಕಾರಿ/ಹಿರಿಯ / ಕಾರ್ಮಿಕ ನಿರೀಕ್ಷಕರುಗಳ ಕಛೇರಿಗಳಲ್ಲಿ ಮಂಡಳಿಯ ಕೆಲಸದ ಒತ್ತಡ ಹೆಚ್ಚಿಗೆ ಇರುವುದರಿಂದ ಅಧಿಕಾರಿಗಳ ಕೋರಿಕೆಯಂತೆ ಹೆಚ್ಚುವರಿಯಾಗಿ 07 Executives ಮತ್ತು 36 Data Entry Operator ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಒದಗಿಸಿರುವುದಕ್ಕೆ ಅನುಮೋದನೆ ನೀಡುವ ಬಗ್ಗೆ.**

ಕರ್ನಾಟಕ ಕಟ್ಟಡ ಮತ್ತುಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಯವ್ಯಾಪ್ತಿಯು ವಿಸ್ತಾರವಾಗುತ್ತಿದ್ದು, ಯಶಸ್ವಿ ಕಾರ್ಯ ಸಾಧನೆಗೆ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಮಂಡಳಿಯ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಧನ ಸಹಾಯ ಮಂಜೂರಾತಿ, ಮಾಸಿಕ ವರದಿ, ಕಟ್ಟಡ ಕಾರ್ಮಿಕರ ನೋಂದಣಿ, ನವೀಕರಣ, ಕ್ಲೈಂ ಅರ್ಜಿಗಳ ಪರಿಷ್ಕರಣೆ ಮತ್ತುಇತರೆ ಕೆಲಸಗಳನ್ನು ನಿರ್ವಹಿಸಲು ಸಿಬ್ಬಂದಿಗಳ ಕೊರತೆ ಇರುತ್ತದೆ.

ಮಂಡಳಿಯ ಕೆಲಸ ಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸಲು ಹೆಚ್ಚುವರಿಯಾಗಿ ಎಕ್ಸಿಕ್ಯೂಟಿವ್ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಒದಗಿಸುವಂತೆ ಕಾರ್ಮಿಕ ಇಲಾಖೆಯ ಕ್ಷೇತ್ರ ಮಟ್ಟದ ಅಧಿಕಾರಿಗಳ ಕೋರಿಕೆಯಂತೆ ಕಾರ್ಮಿಕ ಅಧಿಕಾರಿ / ಹಿರಿಯ / ಕಾರ್ಮಿಕ ನಿರೀಕ್ಷಕರ ಕಛೇರಿಗಳಿಗೆ 07 ಜನ ಎಕ್ಸಿಕ್ಯೂಟಿವ್‌ಗಳನ್ನು 36 ಜನ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಒದಗಿಸಿರುವುದಕ್ಕೆ ಘಟನೋತ್ತರ ಅನುಮೋದನೆಗೆ ಸದರಿ ವಿಷಯವನ್ನು ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕೆ ಕಾರ್ಯದರ್ಶಿಯವರು ಮಂಡಿಸಿದರು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಅನುಮೋದನೆ ನೀಡಲಾಯಿತು.**

## ವಿಷಯ ಸಂಖ್ಯೆ-19

**ಮಂಡಳಿಯಿಂದ ವಿವಿಧ ಜಿಲ್ಲೆಗಳಲ್ಲಿ ಖರೀದಿಸಿರುವ ನಿವೇಶನಗಳಿಗೆ ಈಗಾಗಲೇ ಪಾವತಿ ಮಾಡಿರುವ ಮೊತ್ತ ಹೊರತುಪಡಿಸಿ, ಬಾಕಿ ಮೊತ್ತ ಪಾವತಿಸಲು ಅನುಮೋದನೆ ನೀಡುವ ಬಗ್ಗೆ.**

ಮಂಡಳಿಯ ಕಾರ್ಯದರ್ಶಿಗಳು ಮಾತನಾಡುತ್ತಾ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು 2013 ರಲ್ಲಿ 11 ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಜಮೀನು ಹಂಚಿಕೆಗೆ ಕೋರಿಕೆ ಸಲ್ಲಿಸಿದ್ದು, ಅವುಗಳಲ್ಲಿ ಓಬದೇನಹಳ್ಳಿ ಕೈಗಾರಿಕಾ ಪ್ರದೇಶ, ಬಿ.ಕೆ.ಕಂಗ್ರಾಳಿ ಕೈಗಾರಿಕಾ ಪ್ರದೇಶ ಮತ್ತು ಹಾಸನ ಕೈಗಾರಿಕಾ ಬೆಳವಣಿಗೆ ಕೇಂದ್ರ ಪ್ರಕರಣಗಳನ್ನು ಹೊರತುಪಡಿಸಿ, ಉಳಿದ ಪ್ರಕರಣಗಳಲ್ಲಿ ತ್ವರಿತವಾಗಿ ಹಂಚಿಕೆ ಮಾಡಿಗುತ್ತಿಗೆಕರಾರು ಪತ್ರಗಳ ನೋಂದಣಿಕಾರ್ಯವನ್ನು ನೆರವೇರಿಸಲು ಸಭೆಗೆ ತಿಳಿಸಿದರು. ಸದರಿ 11 ಪ್ರಕರಣಗಳ ಕುರಿತು ವಿವರವಾಗಿ ಕಾರ್ಯದರ್ಶಿಗಳು ಈ ಕೆಳಕಂಡಂತೆ ನಿರ್ಣಯವನ್ನು ಮಂಡಿಸಿದರು.

1. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಒಂದು ಕೈಗಾರಿಕಾ ಪ್ರದೇಶದಲ್ಲಿ ಜಮೀನು ಹಂಚಿಕೆ ಕೋರಿ ಭೂ ಬೆಲೆಯ ಪೂರ್ತಿ ಮೊತ್ತ ಪಾವತಿಸಿ, ತದನಂತರ ಇನ್ನೊಂದು ಕೈಗಾರಿಕಾ ಪ್ರದೇಶದಲ್ಲಿ ಪರಿಷ್ಕೃತ ಹಂಚಿಕೆದರದಲ್ಲಿ ಹಂಚಿಕೆ ಮಾಡಿದ್ದಲ್ಲಿ, ಈಗಾಗಲೇ ಪಾವತಿಸಿರುವ ಮೊತ್ತದ ಮೇಲೆ ಶೇ.9% ಬಡ್ಡಿದರದಂತೆ ಬಡ್ಡಿಯನ್ನು ಪರಿಗಣಿಸಿ ಪರಿಷ್ಕೃತದರದಂತೆ ಬಾಕಿ ಮೊತ್ತವನ್ನು ಪಾವತಿಸಿಕೊಂಡು ಜಮೀನು ಹಂಚಿಕೆ ಮಾಡುವುದು.
2. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಒಂದು ಕೈಗಾರಿಕಾ ಪ್ರದೇಶದಲ್ಲಿ ಜಮೀನು ಹಂಚಿಕೆ ಮಾಡಲು ಅಂದಿನ ಹಂಚಿಕೆದರದಂತೆ ಪೂರ್ತಿ ಭೂ ಬೆಲೆ ಪಾವತಿಸಿದ್ದಲ್ಲಿ, ತದನಂತರ ಕೆಐಎಡಿಬಿ ಮಂಡಳಿಯು ದರಗಳನ್ನು ಪರಿಷ್ಕರಿಸಿದ್ದಲ್ಲಿ ಹಂಚಿಕೆಗೆ ಕೋರಿ ಪೂರ್ತಿ ಭೂ ಬೆಲೆ ಮೊತ್ತ ಪಾವತಿಸಿರುವ ಪ್ರಕರಣಗಳಲ್ಲಿ ಅಂದಿನ ಹಂಚಿಕೆದರದಂತೆ ಹಂಚಿಕೆ ಮಾಡುವುದು ಎಂದು ಸಭೆಯಲ್ಲಿ ಕಾರ್ಯದರ್ಶಿಗಳು ಸದರಿ ವಿಷಯವನ್ನು ತಿಳಿಸಿದರು.

# ವಿಷಯ ಸಂಖ್ಯೆ-20

## ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಇತರೆ ವಿಷಯಗಳ ಚರ್ಚೆ

1. ಕೋವಿಡ್-19ರ 2ನೇ ಅಲೆಯ ಪರಿಹಾರ ಮೊತ್ತ ರೂ.3000/-ಗಳನ್ನು ಹೆಚ್ಚಿಸುವಂತೆ ಕೋರಿ ಶ್ರೀ ನಾಗನಾಥ (ಹೆಚ್.ಎಮ್.ಎಸ್) ಮತ್ತು ಶ್ರೀ ಸುರೇಶ್.ಎಸ್.ನಾಡಿಗೇರ್ (ಬಿ.ಎಮ್.ಎಸ್) ಇವರುಗಳು ಮನವಿ ಮಾಡಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಬೇರೆ ರಾಜ್ಯಗಳಿಗೆ ಹೋಲಿಸಿದಲ್ಲಿ ಕರ್ನಾಟಕ ರಾಜ್ಯದಲ್ಲಿಯೇ ಪರಿಹಾರದ ಮೊತ್ತವು ಹೆಚ್ಚಾಗಿರುತ್ತದೆ ಎಂದು ತಿಳಿಸಿದರು.
2. ಸುಂಕದ ಮೊತ್ತವನ್ನು ಶೇ.1 ರಿಂದ ಶೇ.1.5ಕ್ಕೆ ಹೆಚ್ಚಿಸಲು ಪ್ರಸ್ತಾಪಿಸಲಾಯಿತು. ಮಂಡಳಿಯ ಕಾರ್ಯದರ್ಶಿಗಳು ಮಾತನಾಡಿ ಈಗಾಗಲೇ ಸುಂಕ ಸಂಗ್ರಹಣೆಗಾಗಿ ಸುಮಾರು 600 ಪತ್ರಗಳನ್ನು ವಿವಿಧ ಪ್ರಾಧಿಕಾರಿಗಳಿಗೆ ಬರೆಯಲಾಗಿದೆ. ಸದರಿ ಪತ್ರಗಳಲ್ಲಿ ಸುಂಕ ಮೊತ್ತವನ್ನು ನೇರವಾಗಿ ನಿಗದಿತ ಸಮಯದಲ್ಲಿ ಮಂಡಳಿಯ ಸುಂಕ ಖಾತೆಗೆ ನೇರವಾಗಿ ಜಮಾ ಮಾಡಲು ತಿಳಿಸಲಾಗಿದೆ. ಹೀಗಾಗಿ ಬಾಕಿ ಉಳಿದ ಸುಂಕ ಮೊತ್ತವು ಸ್ವಲ್ಪ ಪ್ರಮಾಣದಲ್ಲಿ ಮಂಡಳಿಯ ಖಾತೆಗೆ ಜಮೆಯಾಗಿರುತ್ತದೆ ಸುಂಕದ ಮೊತ್ತವನ್ನು ಹೆಚ್ಚಿಸಲು ಹಾಗೂ ಸುಂಕ ಪಾವತಿಗೆ ಬಾಕಿ ಇರುವ ಮೊತ್ತವನ್ನು ಜಮೆ ಮಾಡಿಕೊಳ್ಳಲು ವಿಜಿಲೆನ್ಸ್ ಸ್ಕ್ವಾಡನ್ನು ರಚಿಸಿದಲ್ಲಿ ಉತ್ತಮವಾಗುತದೆಂದು ತಿಳಿಸಿದರು. ಅಲ್ಲದೆ ಸುಂಕ ಸಂಗ್ರಹಣೆಗಾಗಿ ಸುಂಕ ಪಾವತಿದಾರರಿಗೆ ಮಂಡಳಿಯ ವತಿಯಿಂದ ನಿರ್ದೇಶನಗಳನ್ನು ನೀಡಿ ಸುಂಕ ಸಂಗ್ರಹಣೆಯನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಸಹಾ ಮಂಡಳಿಯ ಕಾರ್ಯದರ್ಶಿಗಳು ಸೂಚಿಸಿದರು. ಮಂಡಳಿಯ ಅಧ್ಯಕ್ಷರು ಮಾತನಾಡಿ ದೆಹಲಿಯಲ್ಲಿ ಅಳವಡಿಸಿದಂತೆ GEO Spatial ತಂತ್ರಾಂಶದ ಮೂಲಕ ಪ್ರಾಯೋಗಿಕವಾಗಿ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ನಿರ್ಮಾಣ ಚಟುವಟಿಕೆಗಳನ್ನು GEO ಟ್ಯಾಗ್ ಮಾಡಿ ಕಾಮಗಾರಿಗಳ ಸುಂಕ ನಿರ್ಧರಿಸಿ ಸಮರ್ಪಕವಾಗಿ ಸುಂಕ ಸಂಗ್ರಹಣೆ ಮಾಡಬಹುದೆಂದು ತಿಳಿಸಿದರು.
3. ಮಂಡಳಿಯ ಕಾರ್ಯ ಚಟುವಟಿಕೆಗಳನ್ನು ಇನ್ನೂ ಉತ್ತಮವಾಗಿ ಕಾರ್ಯ ನಿರ್ವಹಿಸಲು ಮಂಡಳಿಯ ಅಧ್ಯಕ್ಷರು, ಸದಸ್ಯರುಗಳು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಂಡಳಿಯ ಕಾರ್ಯದರ್ಶಿಗಳು ಮತ್ತು ಸಿಬ್ಬಂದಿಗಳು ಇತರೆ ರಾಜ್ಯಗಳಿಗೆ ಪ್ರವಾಸ ಕೈಗೊಂಡು ಆ ರಾಜ್ಯಗಳಲ್ಲಿನ ಮಂಡಳಿಗಳು ಕಾರ್ಯನಿರ್ವಹಿಸುತ್ತಿರುವ ಮಾದರಿ ಕುರಿತು ಪರಿಶೀಲಿಸಿ, ಮಾದರಿ ಉತ್ತಮವೆನಿಸಿದಲ್ಲಿ ನಮ್ಮ ರಾಜ್ಯದಲ್ಲಿಯು ಅನ್ವಯಿಸಿಕೊಂಡು ಮಂಡಳಿಯ ಕಾರ್ಯ ಚಟುವಟಿಕೆಗಳನ್ನು ಇನ್ನೂ ಉತ್ತಮ ಗೊಳಿಸಬಹುದೆಂದು ತಿಳಿಸಿದರು.
4. ಕಾರ್ಮಿಕ ಬಂಧುಗಳು ಈಗಾಗಲೇ ಮಂಡಳಿಯ ಸೇವಾ ಸೌಲಭ್ಯಗಳನ್ನು ಕಟ್ಟಡ ಕಾರ್ಮಿಕರಿಗೆ ಒದಗಿಸುವಲ್ಲಿ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿದ್ದು ಅವರುಗಳ ಕಾರ್ಯವು ಸಮರ್ಪಕವಾಗಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇವರ ಸೇವೆಯನ್ನು ರದ್ದುಗೊಳಿಸಬಹುದೆಂದು ಸಭೆಗೆ ತಿಳಿಸಿದರು. ಇದಕ್ಕೆ ಹಾಜರಿದ್ದ ಮಂಡಳಿಯ ಸದಸ್ಯರು ಈಗಾಗಲೇ ಕಾರ್ಮಿಕ ಬಂಧುಗಳಿಗೆ ಪಾವತಿಸಲು ಬಾಕಿಯಿರುವ ಗೌರವಧನವನ್ನು ಪಾವತಿಸಿ ಅವರ ಸೇವೆಯನ್ನು ಮುಕ್ತಾಯಗೊಳಿಸಲು ಸಭೆಯು ಒಪ್ಪಿಗೆ ಸೂಚಿತು.
5. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 2021-22 ನೇ ಸಾಲಿನ ಆಯವ್ಯಯದಲ್ಲಿ ಮಾಹಿತಿ ಶಿಕ್ಷಣ ಮತ್ತು ಸಂವಹನ (ಐ.ಇ.ಸಿ) ಚಟುವಟಿಕೆಗಳ ಅನುಷ್ಠಾನಕ್ಕಾಗಿ ರೂ.20.00 ಕೋಟಿ ಮೊತ್ತವನ್ನು ಮೀಸಲಿಡಲಾಗಿರುತ್ತದೆ. ಸದರಿ ಆಯವ್ಯಯ ಮೊತ್ತದಲ್ಲಿ ಕಾರ್ಮಿಕ ಇಲಾಖೆಯ ಕಛೇರಿಗಳಲ್ಲಿ ಇಲಾಖೆಯ ಕಾರ್ಯಕ್ರಮಗಳನ್ನು ಪ್ರಚಾರ ಪಡಿಸಲು ವೀಡಿಯೋ ಡಿಸ್ಪ್ಲೇ ಅಳವಡಿಕೆ, ಬಸ್ ಬ್ರ್ಯಾಂಡಿಂಗ್, ರೇಡಿಯೋ ಜಾಹೀರಾತು, ಕೆ.ಎಸ್.ಆರ್.ಟಿ.ಸಿ ಬಸ್ ಸ್ಟ್ಯಾಂಡ್ ಆಡಿಯೋ ಅನೌನ್ಸ್‌ಮೆಂಟ್ಸ್, ಆಟೋ ಬ್ರ್ಯಾಂಡಿಂಗ್, ಬಿ.ಎಂ.ಟಿ.ಸಿ ಬಸ್ ನಿಲ್ದಾಣಗಳಲ್ಲಿ ಎಲ್.ಇ.ಡಿ ಡಿಸ್ಪ್ಲೇ ಮೂಲಕ ಪ್ರಚಾರ, ಸಾಕ್ಷ್ಯ ಚಿತ್ರಗಳು/ಕಿರುಚಿತ್ರಗಳು, ಟಿ.ವಿ ಜಾಹೀರಾತು, ಟಾಟಾ ಏಸ್ ಬ್ರ್ಯಾಂಡಿಂಗ್, ಆಟೋಮೇಟೆಡ್ ಕಾಲ್ಸ್ ಅಂಡ್ ಮೆಸೇಜಸ್, ಆಟೋ

ಪ್ರಚಾರ, ಮೊಬೈಲ್ ವ್ಯಾನ್‌ಗಳಲ್ಲಿ ವೀಡಿಯೋ ಪರದೆಯ ಮೂಲಕ ಪ್ರಚಾರ, ಸಾಮಾಜಿಕ ಮಾಧ್ಯಮ ಚಟುವಟಿಕೆಗಳು, ಟ್ರೈನ್ ಬ್ರ್ಯಾಂಡಿಗ್, ರೈಲು ನಿಲ್ದಾಣಗಳಲ್ಲಿ ವೀಡಿಯೋ ಡಿಸ್ಪ್ಲೇ ಜಾಹಿರಾತು, ಬಿ.ಬಿ.ಎಂ.ಪಿ ವ್ಯಾಪ್ತಿಯ ಬಿ.ಎಂ.ಟಿ.ಸಿ ಬಸ್ ಶೆಲ್ಟರ್ ಬ್ರ್ಯಾಂಡಿಂಗ್, ಪತ್ರಿಕಾ ಪ್ರಕಟಣೆಗಳು, ಜಾಹಿರಾತು ಬೋರ್ಡ್‌ಗಳ ಅಳವಡಿಕೆ (ಟಿನ್ ಬೋರ್ಡ್, ಹೋರ್ಡಿಂಗ್ ಪ್ಯಾನಲ್ ಮುಂತಾದವು) ಮತ್ತು ಪ್ರಿಂಟಿಂಗ್ ಚಟುವಟಿಕೆಗಳನ್ನು ಕೈಗೊಳ್ಳುವ ಕುರಿತು ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಯಿತು.

6. ಜಿಲ್ಲೆಗಳಲ್ಲಿ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲು ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಯಿತು.

7. ಮಂಡಳಿಯಿಂದ ಇಲಾಖೆಯ ಕ್ಷೇತ್ರ ಮಟ್ಟದ ಅಧಿಕಾರಿಗಳೊಂದಿಗೆ ನಿರಂತರವಾಗಿ ಆನ್‌ಲೈನ್ ಸಭೆಗಳನ್ನು ನಡೆಸಿ ಮಂಡಳಿಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಈ ಉದ್ದೇಶಕ್ಕಾಗಿ ಮಂಡಳಿಯಲ್ಲಿ ಸುಸಜ್ಜಿತವಾದ ವಿಡಿಯೋ ಕಾನ್ಫರೇನ್ಸ್ ಸಭಾಂಗಾಣದ ಅವಶ್ಯಕತೆ ಇರುತ್ತದೆ. ಅದುದರಿಂದ ಮಂಡಳಿಯ ಕಲ್ಯಾಣ ಸುರಕ್ಷಾ ಭವನದ ಮೊದಲನೇ ಮಹಡಿಯಲ್ಲಿ ಸರ್ಕಾರದ ಅಂಗ ಸಂಸ್ಥೆಯಾಗಿರುವ M/s. KEONICS ಸಂಸ್ಥೆ ಮೂಲಕ ರೂ. 29.50 ಲಕ್ಷಗಳ ವೆಚ್ಚದಲ್ಲಿ ಮಂಡಳಿಯ ಅವಶ್ಯಕತೆಗೆ ಅನುಗುಣವಾಗಿ ಸಭಾಂಗಣವನ್ನು ನವೀಕರಿಸಲಾಗಿದ್ದು, ಸದರಿ ವಿಷಯದ ಬಗ್ಗೆ ಚರ್ಚಿಸಿ ಘಟನ್ನೋತ್ತರ ಅನುಮೋದನೆ ನೀಡಲಾಯಿತು.

8. ಮಂಡಳಿಯಲ್ಲಿ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಂಡಳಿಯ ಶಾಸನಾತ್ಮಕ ಸಭೆಗಳನ್ನು ಹಾಗೂ ಇಲಾಖೆಯ ಅಧಿಕಾರಿಗಳು, ಕಾರ್ಮಿಕ ಸಂಘದ ಪ್ರತಿನಿಧಿಗಳು ಹಾಗೂ ಇತರೆ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಸಭೆಯನ್ನು ಕಾಲಕಾಲಕ್ಕೆ ನಡೆಸಿ, ಮಂಡಳಿಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಅವಶ್ಯಕತೆ ಇರುತ್ತದೆ. ಈ ಹಿನ್ನಲೆಯಲ್ಲಿ ಮಂಡಳಿಯ ನೆಲ ಮಹಡಿಯಲ್ಲಿರುವ ಸಭಾಂಗಣವನ್ನು ವ್ಯವಸ್ಥಿತವಾಗಿ ಸೂಕ್ತ ಏಜನ್ಸಿಯ ಮೂಲಕ ಆಸನ ವ್ಯವಸ್ಥೆ ಹಾಗೂ ಆಡಿಯೋ ವಿಸ್ವಲ್ ಸಿಸ್ಟಮ್ ಅಳವಡಿಸಿ ನವೀಕರಿಸುವ ಕುರಿತು ಹಾಗೂ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕೊಠಡಿಯ ವಿಸ್ತರಣೆ ಹಾಗೂ ಕಾರ್ಮಿಕ ಇಲಾಖೆಯ ಕೇಂದ್ರ ಕಛೇರಿಯಾದ ಕಾರ್ಮಿಕ ಭವನದ ವಿಡಿಯೋ ಕಾನ್ಫರೇನ್ಸ್ ಸಭಾಂಗಣವನ್ನು ನವೀಕರಿಸುವ ಕುರಿತು ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಯಿತು.

9. Preventive Health Care Training and Checkup ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಉದ್ದೇಶಿಸಿ ಪ್ರಸ್ತುತ ರಾಜ್ಯದಲ್ಲಿ ಕೋವಿಡ್-19ರ 3ನೇ ಅಲೆ ವ್ಯಾಪಿಸುವ ಸಂಭವವಿರುವುದರಿಂದ ಕಾರ್ಮಿಕರಿಗೆ ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ದಿಸೆಯಲ್ಲಿ ಪ್ರಯೋಗಿಕವಾಗಿ ಬೆಂಗಳೂರಿನ ಯಾವುದಾದರೂ ಒಂದು ಉಪ ವಿಭಾಗ, ಮೈಸೂರು, ಕಲಬುರಗಿ ಮತ್ತು ಬೆಳಗಾವಿಯ ಯಾವುದಾದರು ಒಂದು ಉಪವಿಭಾಗ ಕಛೇರಿ ವ್ಯಾಪ್ತಿಯ ಫಲಾನುಭವಿಗಳಿಗೆ ಈ ಸೌಲಭ್ಯವನ್ನು ಒದಗಿಸಲು ಸರ್ಕಾರದಿಂದ ಕೆಟಿಪಿಪಿ ಕಾಯ್ದೆ, ಕಲಂ 4ಎ ರಡಿ ವಿನಾಯಿತಿ ಪಡೆದು ಕ್ರಮವಹಿಸಲು ತೀರ್ಮಾನಿಸಲಾಯಿತು. ತದನಂತರ ಉಳಿದ ಎಲ್ಲಾ ಉಪ ವಿಭಾಗ ಕಛೇರಿ ವ್ಯಾಪ್ತಿಯ ಫಲಾನುಭವಿಗಳಿಗೆ ಈ ಸೌಲಭ್ಯವನ್ನು ಒದಗಿಸಲು ಸರ್ಕಾರದಿಂದ KTTP ಕಾಯ್ದೆ ಕಲಂ 4ಎ ರಡಿ ವಿನಾಯಿತಿ ಪಡೆದು ಕ್ರಮವಹಿಸಲು ತೀರ್ಮಾನಿಸಲಾಯಿತು.

10. 2021-22 ನೇ ಸಾಲಿನಲ್ಲಿ 100 ಶಿಶು ಪಾಲನಾ ಕೇಂದ್ರಗಳನ್ನು ತೆರೆಯಲಾಗುತ್ತಿದ್ದು, ಆದರೂ ಸಹ ರಾಜ್ಯಾದದ್ಯಾಂತ ಎಲ್ಲಾ ಪ್ರದೇಶಗಳಲ್ಲಿಯೂ ಸಹ ಶಿಶುಪಾಲನಾ ಕೇಂದ್ರಗಳನ್ನು ತೆರೆಯಲು ಸಾಧ್ಯವಾಗಿರದ ಕಾರಣ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಅನೂಕೂಲ ಕಲ್ಪಿಸುವ

ಹಿತದೃಷ್ಟಿಯಿಂದ ಇನ್ನೂ ಹೆಚ್ಚುವರಿಯಾಗಿ 25 ಶಿಶುಪಾಲನಾ ಕೇಂದ್ರಗಳನ್ನು ತೆರೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು

11. ಮಂಡಳಿಯ 2020-21 ನೇ ಸಾಲಿನ ಆಯವ್ಯಯದಲ್ಲಿ ಅನುಮೋದನೆಗೊಂಡ ಯೋಜನೆಯಾದ ಇಮ್ಯೂನಿಟಿ ಬೂಸ್ಟರ್ ಕಿಟ್ ವಿತರಣೆ ಯೋಜನೆಯನ್ನು ಈಗಾಗಲೇ ಮಂಡಳಿಯ ನೋಂದಾಯಿತ ಕಾರ್ಮಿಕರ ಪೈಕಿ 40 ವರ್ಷ ಮೇಲ್ಪಟ್ಟ ವಯಸ್ಸಿನ ಒಟ್ಟು 4,50,000 ಕಾರ್ಮಿಕರಿಗೆ ಪ್ರಾದೇಶಿಕವಾರು ವಿತರಿಸಲಾಗುತ್ತಿದ್ದು, ಕೆಲವೊಂದು ಕಡೆ ಅಗತ್ಯ ಸಂಖ್ಯೆಯ ಕಾರ್ಮಿಕರು ದೊರೆಯದ ಪಕ್ಷದಲ್ಲಿ 30 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಕಾರ್ಮಿಕರಿಗೂ ವಿತರಿಸಲು ತೀರ್ಮಾನಿಸಲಾಯಿತು.

ಮುಂದುವರೆದು, 2020-2021 ನೇ ಸಾಲಿನ ಆಯವ್ಯಯದಲ್ಲಿ ಇಮ್ಯೂನಿಟಿ ಬೂಸ್ಟರ್ / ನ್ಯೂಟ್ರಿಷನ್ ಕಿಟ್ ಯೋಜನೆಗಾಗಿ ಮೀಸಲಿಟ್ಟ ರೂ.150.00 ಕೋಟಿ ಅನುದಾನದಲ್ಲಿ ಇನ್ನೂ ಬಾಕಿ ಉಳಿದಿರುವ ಮೊತ್ತದಲ್ಲಿ ಮಂಡಳಿಯ ನೋಂದಾಯಿತ 30 ರಿಂದ 40 ವರ್ಷ ವಯಸ್ಸಿನ ಕಾರ್ಮಿಕರಿಗೂ ಸಹ ಇಮ್ಯೂನಿಟಿ ಬೂಸ್ಟರ್ ಕಿಟ್‌ಗಳನ್ನು ಫಲಾನುಭವಿಗಳಿಗೆ ಈ ಸೌಲಭ್ಯವನ್ನು ಒದಗಿಸಲು ಸರ್ಕಾರದಿಂದ ಕೆಟಿಪಿಪಿ ಕಾಯ್ದೆ, 1999 ರ ಕಲಂ 4 (ಎ) ರಡಿ ವಿನಾಯಿತಿ ಪಡೆದು ಕ್ರಮವಹಿಸಲು ತೀರ್ಮಾನಿಸಲಾಯಿತು

12. ರಾಜ್ಯದ ಹಲವಾರು ಕಾರ್ಮಿಕ ನಿರೀಕ್ಷಕರುಗಳ ಕಾರ್ಯವ್ಯಾಪ್ತಿಯೂ ಒಂದಕ್ಕಿಂತ ಹೆಚ್ಚು ತಾಲ್ಲೂಕುಗಳಿದ್ದು, ಇದರಿಂದ ಸುಮಾರು 27 ತಾಲ್ಲೂಕುಗಳಲ್ಲಿ ಕಾರ್ಮಿಕ ಇಲಾಖೆಯ ಯಾವುದೇ ಕಛೇರಿಗಳು ಇರುವುದಿಲ್ಲ. ಇದಲ್ಲದೇ ಸರ್ಕಾರದ ಆದೇಶದನ್ವಯ 61 ಹೊಸ ತಾಲ್ಲೂಕುಗಳನ್ನು ಸೃಜಿಸಲಾಗಿದ್ದು, ಇಂತಹ ತಾಲ್ಲೂಕಗಳಲ್ಲಿ ಕೂಡ ಕಾರ್ಮಿಕ ಇಲಾಖೆಯ ಯಾವುದೇ ಪ್ರಾತಿನಿಧ್ಯ ಇರುವುದಿಲ್ಲ. ಆದುದರಿಂದ ಇಂತಹ ತಾಲ್ಲೂಕುಗಳಲ್ಲಿ ಮಂಡಳಿಯ ಯೋಜನೆಗಳನ್ನು ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಬಾಡಿಗೆ ಕೊಠಡಿಯನ್ನು ಪಡೆದು ತಲಾ ಒಂದು ಡಿಇಒ ಅನ್ನು ನೇಮಿಸಿಕೊಳ್ಳುವ ಕುರಿತು ಹಾಗೂ ಈ ಕಛೇರಿಗಳಿಗೆ ಆಗತ್ಯ ಕಂಪ್ಯೂಟರ್ ಮತ್ತು ಪಿರೋಪಕರಣಗಳನ್ನು ಒದಗಿಸುವ ಕುರಿತು ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಯಿತು.

13. ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಮತ್ತು ಯಲ್ಲಾಪುರ ತಾಲೂಕಿನಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿಗೆ ನಿವೇಶನ ಹಂಚಿಕೆಯಾಗಿರುತ್ತದೆ. ಸದರಿ ನಿವೇಶನದ ಸ್ಥಳದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಅವಶ್ಯಕವಾಗಿರುವ ಕಛೇರಿ ಕಟ್ಟಡವನ್ನು ನಿರ್ಮಿತಿ ಕೇಂದ್ರದ ಮೂಲಕ ನಿರ್ಮಿಸಲು ಸಭೆಯು ಸರ್ವಾನುಮತದಿಂದ ತೀಮಾನಿಸಿತು.

14. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ಕ್ಲೇಮ್‌ಗಳ ವಿಲೇವಾರಿಯನ್ನು ಕಾರ್ಮಿಕ ಇಲಾಖೆಯ ಕಛೇರಿಗಳಲ್ಲಿ ಆನ್ ಲೈನ್ ಮೂಲಕ ಮಾಡಲಾಗುತ್ತಿದ್ದು ಈ ಕಾರಣಕ್ಕಾಗಿ ಅಧಿಕಾರಿಗಳ ಕಛೇರಿಗೆ **Uninterrupted Power Supply** (UPS) ನೀಡುವ ಅವಶ್ಯಕತೆ ಇದ್ದು ಈ ಕಾರಣಕ್ಕಾಗಿ ರಾಜ್ಯದ 41 ಕಾರ್ಮಿಕ ಅಧಿಕಾರಿಗಳಿಗೆ 2 ಕೆವಿ UPS ನೀಡಲು ಹಾಗೂ ಮಂಡಳಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಜಿಲ್ಲಾ ಕೇಂದ್ರದಲ್ಲಿ ಅಧಿಕಾರಿಗಳಿಗೆ Xerox Mechine ಗಳನ್ನು ಒದಗಿಸುವ ಕುರಿತು ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಯಿತು. ಮುಂದುವರೆದು ರಾಜ್ಯದ 36 ಕಛೇರಿಗಳಿಗೆ ಹೆಚ್ಚುವರಿ ಡಿಇಒ ಗಳನ್ನು ಹಾಗೂ 9 Executive ಗಳನ್ನು ನೀಡಲಾಗಿದ್ದು, ಇವರು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಈ ಸಿಬ್ಬಂದಿಗಳಿಗೆ ಕಂಪ್ಯೂಟರ್ ಗಳನ್ನು ನೀಡಲು ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಯಿತು.

15. ಮಂಡಳಿಯಿಂದ ಕೋವಿಡ್-19 ಎರಡನೇ ಅಲೆ ಸಂಧರ್ಭದಲ್ಲಿ ನೋಂದಾಯಿತ ಕಾರ್ಮಿಕರಿಗೆ ವಿತರಿಸಲು ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ಪೂರೈಸಲು ಅರ್ಹ ಸಂಸ್ಥೆಗಳಿಗೆ ಕಾರ್ಯಾದೇಶ ನೀಡುವ ಸಂಧರ್ಭದಲ್ಲಿ ಸಾರಿಗೆ ವೆಚ್ಚವನ್ನು ಪ್ರತ್ಯೇಕವಾಗಿ ನಿಯಾಮಾನುಸಾರ ಪಾವತಿಸಲಾಗುವುದೆಂದು ವಿಧಿಸಿರುವ ಷರತ್ತಿನ ಬಗ್ಗೆ ಚರ್ಚಿಸಲಾಗಿ, ಮಂಡಳಿಯಿಂದ ಆಹಾರ ಪೂರೈಕೆ ಮಾಡುವ ಸಂಸ್ಥೆಗಳು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಎಫ್‌ಸಿಐ ನಿಂದ ಆಹಾರ ಕಿಟ್‌ಗಳಿಗೆ ಅಕ್ಕಿಯನ್ನು ಪಡೆದ ಜಿಲ್ಲೆಯಲ್ಲಿ ಪೂರೈಸಿದ ಕಿಟ್‌ಗಳಿಗೆ ತಲಾ ಒಂದಕ್ಕೆ ರೂ.15/- ರಂತೆ ಮತ್ತು ಅಕ್ಕಿಯನ್ನು ಎಫ್‌ಸಿಐನಿಂದ ಪಡೆದ ಜಿಲ್ಲೆಯ ಹೊರಗಿನ ಜಿಲ್ಲೆಗಳಿಗೆ ಪೂರೈಸಿದ ಆಹಾರ ಸಾಮಾಗ್ರಿಗಳ ಕಿಟ್‌ಗಳಿಗೆ ತಲಾ ಒಂದಕ್ಕೆ ರೂ.35/-ರಂತೆ ಸಾರಿಗೆ ವೆಚ್ಚವನ್ನು ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

16. ಮಾನ್ಯ ಮುಖ್ಯಮಂತ್ರಿಗಳು 2020-21ನೇ ಸಾಲಿನ ಆಯವ್ಯಯದಲ್ಲಿ ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಒಟ್ಟು 10 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಲು ಘೋಷಿಸಿರುತ್ತಾರೆ. ಅದರಂತೆ, ಮಂಡಳಿಯ ವತಿಯಿಂದ ಬೆಳಗಾವಿ ಪ್ರಾದೇಶಿಕ ವ್ಯಾಪ್ತಿಯಲ್ಲಿ 03 ಶಿಶುಪಾಲನಾ ಕೇಂದ್ರಗಳನ್ನು ತೆರೆಯಲು ಇ-ಟೆಂಡರ್ ಕರೆಯಲಾಗಿರುವ ವಿಷಯವನ್ನು ಸಭೆಯ ಅವಗಾಹನೆಗೆ ತರಲಾಯಿತು. ಆ ಸಂದರ್ಭದಲ್ಲಿ 2020-21ನೇ ಸಾಲಿನ ಯೋಜನೆಯು ಕೋವಿಡ್ ಹಿನ್ನೆಲೆಯಲ್ಲಿ ಇನ್ನೂ ಅನುಷ್ಠಾನಗೊಂಡಿರದ ಬಗ್ಗೆ ಚರ್ಚಿಸಲಾಗಿ ಕೋವಿಡ್ 19 ನ ಎರಡನೇ ಅಲೆ ಮತ್ತು ಸಾಂಭವ್ಯ ಕೋವಿಡ್ -3 ನೇ ಅಲೆಯಿಂದ ಮಂಡಳಿಯು ಉದ್ದೇಶಿಸಿರುವ ಯೋಜನೆಗಳ ಅನುಷ್ಠಾನ ತಡವಾಗುವ ಸಾಧ್ಯತೆ ಇರುತ್ತದೆ. ಹಾಗಾಗೀ ವೈದ್ಯಕೀಯ ನೆರವು ಒದಗಿಸುವಂತಹ ಯೋಜನೆಗಳನ್ನು ಅಧ್ಯತೆ ಮೇರೆಗೆ ಅನುಷ್ಠಾನಗೊಳಿಸುವ ಉದ್ದೇಶದಿಂದ ಈಗಾಗಲೇ ಬೆಳಗಾವಿ ಪ್ರಾದೇಶಿಕ ವ್ಯಾಪ್ತಿಯಲ್ಲಿ ಕರೆದಿರುವ ಇ-ಟೆಂಡರ್‌ನಲ್ಲಿ ಎಲ್1 ಆಗಿ ಆಯ್ಕೆಯಾಗುವ ಸಂಸ್ಥೆಯ ಅಂತಿಮ ದರಗಳನ್ವಯ ಇನ್ನೂಳಿದ 07 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ವಿವಿಧ ಪ್ರಾದೇಶಿಕಗಳ ವ್ಯಾಪ್ತಿಯಲ್ಲಿ ಶೀಘ್ರವಾಗಿ ತೆರೆಯಲು ಸರ್ಕಾರದಿಂದ ಕೆಟಿಪಿಪಿ 1999ರ ಕಾಯ್ದೆ ಕಲಂ 4(ಎ) ರಡಿಯಲ್ಲಿ ವಿನಾಯಿತಿ ಪಡೆದು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

ಮುಂದುವರೆದು, ರಾಜ್ಯ ಸರ್ಕಾರದ 2021-22ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ 25 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸಹ ಶೀಘ್ರವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಸರ್ಕಾರದಿಂದ ಕೆಟಿಪಿಪಿ 1999ರ ಕಾಯ್ದೆ ಕಲಂ 4(ಎ) ರಡಿಯಲ್ಲಿ ವಿನಾಯಿತಿ ಪಡೆದು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

ಈ ಮೇಲಿನ ಚರ್ಚೆಯೊಂದಿಗೆ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

**(ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್)**
**ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ**
**ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ**
**ನಿರ್ಮಾಣ ಕಾರ್ಮಿಕರ ಕಲ್ಯಾಣ**
**ಮಂಡಳಿ,ಬೆಂಗಳೂರು**